ಅಕ್ಟೋಬರ್ 26, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2008
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಬೆತ್ತನಗೆರೆ ಶಂಕ್ರ ಬಚಾವ್ ಆದ!

# ರಿವೇಂಜ್ ಕಿಲ್ಲಿಂಗ್ ಸ್ಕೆಚ್ ಹಾಕಿದ್ದ ಕಿರಣ್ ಗ್ಯಾಂಗ್ ಸಿಸಿಬಿಗೆ ಲಾಕ್!





ಎಕ್ಸ್‌ಕ್ಲುಸಿವ್ ಡೀಟೈಲ್ಸ್!



## ಡೆತ್‌ನೋಟ್‌ನಿಂದ ಹೊರಬಿತ್ತು ಸೂಸೈಡ್ ಸೀಕ್ರೇಟ್ಸ್!



## ಜೈಲ್‌ನಲ್ಲಿ ದರ್ಶನ್ ಕೂಗಾಟ!



## ಬಾಂಗ್ಲಾ ಹುಡ್ಗೀರ ಮಾರಾಟ ಗುರುಮಾ ಜ್ಯೋತಿ ಅರೆಸ್ಟ್!

## ಒನ್‌ಸೈಡೆಡ್ ಲವ್‌ಸ್ಟೋರಿಗೆ ಇಬ್ಬರ ಬಲಿ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯುರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)


**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ಮುಂಬೈನಲ್ಲಿ ಮೊಟ್ಟ ಮೊದಲ ಕನ್ನಡ ದಿನಪತ್ರಿಕೆ "ಕರ್ನಾಟಕ ಮಲ್ಲ" ಪ್ರಕಟಿಸಿದ ಶ್ರೀ ಎಂ.ಮಲ್ಲಿಕಾರ್ಜುನಯ್ಯ!



ಕನ್ನಡಿಗರು ಲಕ್ಷಾಂತರ ಸಂಖ್ಯೆಯಲ್ಲಿರೋ ಮುಂಬೈನಲ್ಲಿ 1992 ರಲ್ಲಿ ಒಂದು ಕನ್ನಡ ದಿನಪತ್ರಿಕೆ ಹೊರಡಿಸಿದ ಸಾಹಸಿ ಶ್ರೀ ಎಂ. ಮಲ್ಲಿಕಾರ್ಜುನಯ್ಯ! ಪತ್ರಿಕೆಯ ಹೆಸರೇನು ಗೊತ್ತೇ? "ಕರ್ನಾಟಕ ಮಲ್ಲ" ಪರಿಚಯವೇ ಇಲ್ಲದ ಬಾಂಬೆಯಲ್ಲಿ ಸ್ವಂತ ಆಫೀಸ್ ಮಾಡೋದು,



ಪ್ರಿಂಟಿಂಗ್ ಮೆಷೀನ್ ಹಾಕೋದು ಅಂದ್ರೆ ಅಷ್ಟು ಸುಲಭವಿರಲಿಲ್ಲ. ಇಲ್ಲಿ 'ಪೊಲೀಸ್ ನ್ಯೂಸ್' ಮಾಡಿ ಗೆದ್ದಿದ್ದ ಮಲ್ಲಿಕಾರ್ಜುನಯ್ಯ ಅಲ್ಲಿಯೂ 'ಮಲ್ಲ'ನ ಬಾವುಟ ಹಾರಿಸಿಬಿಟ್ರು. ಮುಂಬೈನಲ್ಲಿ ಹುಟ್ಟಿದ ಪ್ರಪ್ರಥಮ ಕನ್ನಡ ದಿನಪತ್ರಿಕೆ ಕರ್ನಾಟಕ ಮಲ್ಲ.

1992ರ ಫೆಬ್ರವರಿ 2ನೇ ತಾರೀಖು ಮಾಟುಂಗಾದಲ್ಲಿರುವ ಸರ್ ಎಂ. ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಬಿಡುಗಡೆ ಆಗಿತ್ತು. ನಮ್ಮ ಸಂಪಾದಕರ ಜೊತೆ ಎಸ್. ಜಯರಾಮ್ (ಸುದ್ದಿ ಸಂಪಾದಕ), ಶ್ರೀನಿವಾಸ ಜೋಕಟ್ಟೆ (ಸಹಾಯಕರು), ಭರತ್‌ಕುಮಾರ್ ಪೊಲಿಪು, ಈಶ್ವರ್ ಅಲೆವೂರು.... ಮುಂತಾದ ಟೀಮ್ ಇತ್ತು. ಪೋರ್ಟ್ ಕ್ಷೇತ್ರದ ಷೇರು ಮಾರುಕಟ್ಟೆ ಕಟ್ಟಡದ ಪಕ್ಕದ ವಿ.ಬಿ. ಗಾಂಧಿ ಮಾರ್ಗದಲ್ಲಿ ಕಚೇರಿ. ಒಂದು ವರ್ಷದ ಬಳಿಕ 1993 ರಲ್ಲಿ ಮೊಹಮ್ಮದ್ ಶಕೂರ್ ಮಾರ್ಗಕ್ಕೆ ಕಚೇರಿ ಬದಲಿಸಿದ್ದರು.

ಮುಂಬೈನಲ್ಲಿ ಸರಣಿ ಬಾಂಬ್ ಸ್ಫೋಟ ನಡೆಯಿತಲ್ಲ, ಆ ಸಂದರ್ಭದಲ್ಲಿ! ಮಧ್ಯಾನ್ಹವಷ್ಟೇ ಕಚೇರಿ ಬದಲಾಯಿಸಲಾಗಿತ್ತು. ಒಂದು ವೇಳೆ ಹಳೇ ಕಚೇರಿಯಲ್ಲೇ ಇದ್ದರೆ, ನಮ್ಮ ಟೀಮ್ ಕೂಡ ಅನಾಹುತಕ್ಕೆ ತುತ್ತಾಗುತ್ತಿತ್ತೋ ಏನೋ! ಮುಂದೆ 1995ರಲ್ಲಿ ಧಾರಾವಿ 90 ಫೀಟ್ ರೋಡ್ ಸ್ವಂತ ಆಫೀಸ್ ಮಾಡಲಾಯಿತು.

ಕರ್ನಾಟಕ ಮಲ್ಲ ಪತ್ರಿಕೆಯನ್ನ ಮುಂಬೈ ಕನ್ನಡಿಗರು ಬಾಚಿ ಅಪ್ಪಿಕೊಂಡಿದ್ದರು. ಅಲ್ಲಿಂದ ಅರಬ್ ಕಂಟ್ರೀಸ್, ಅಬುದಾಬಿ, ಕಲ್ಕತ್ತಾ ಕನ್ನಡಿಗರೆಲ್ಲ ಪತ್ರಿಕೆ ತರಿಸಿಕೊಳ್ಳತೊಳ್ಳಗಿದರು! ಪತ್ರಿಕೆ ಮೂರೇ ವರ್ಷದಲ್ಲಿ

☞ 3



ಸಂಪಾದಕ
**ಎಂ. ರಾಹುಲ್**

**ನನ್ನ ಟೀಂ**

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್ (ಜ್ಯೋತಿಷಿ)
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
ಈ. ರಾಜೇಶ್
ಪ್ರಸರಣಾಧಿಕಾರಿ :
ಜಿ. ವೀರನಗೌಡ




# ದೀಪಾವಳಿ ಕೊಡುಗೆ ನೆಪದಲ್ಲಿ ಬೆಂಗಳೂರು ಜನರಿಗೆ ದೋಖಾ! ಎ ಖಾತಾ ಸೋಗಿನಲ್ಲಿ 15,000 ಕೋಟಿ ಸುಲಿಗೆ ಮಾಡಲಾಗುತ್ತಿದೆಯೇ?

**ಮೊ**ನ್ನೆ ಗುರುವಾರ ಮಾಧ್ಯಮಗಳಲ್ಲಿ ಮೂಡಿಬಂದ ಸರ್ಕಾರಿ ಜಾಹಿರಾತನ್ನು ಗಮನಿಸಿರಬಹುದು. 30ಸ40 ಅಳತೆಯ ಸೈಟ್‌ಗಳು ಹಾಗೂ ಮನೆಗಳಿಗೆ ಓಸಿ ಅಗತ್ಯವಿಲ್ಲ... ಇದು ನಮ್ಮ ಸರ್ಕಾರದಿಂದ ಮಹಾ ಜನತೆಗೆ ದೀಪಾವಳಿ ಕೊಡುಗೆ... ಎಂಬುದೇ ಆ ಜಾಹಿರಾತು. ಇದಕ್ಕೆ ವಿರೋಧ ಪಕ್ಷದವರು ಅವರದ್ದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದಾರೆ. ಆದರೆ, ಕೇಂದ್ರ ಬೃಹತ್ ಕೈಗಾರಿಕೆ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ಮೇಲ್ಕಂಡಂತೆ ನೇರ ಆರೋಪ ಮಾಡಿದ್ದಾರೆ.

30/40 ನಿವೇಶನಕ್ಕೆ 4ರಿಂದ 8 ಲಕ್ಷ ರೂಪಾಯಿವರೆಗೂ ಕಿತ್ತುಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ ಕೇಂದ್ರ ಸಚಿವ ಕುಮಾರಸ್ವಾಮಿ. ದೀಪಾವಳಿ ಕೊಡುಗೆ ಕೊಡುತ್ತಿದ್ದೇವೆ ಎಂದು ಹೇಳಿ ರಾಜ್ಯ ಸರ್ಕಾರ ಬೆಂಗಳೂರು ಜನರ ಕಿಸೆಗೆ ಕೈ ಹಾಕಿದೆ. ಎ ಖಾತಾ ಸೋಗಿನಲ್ಲಿ 15,000 ಕೋಟಿ ಸುಲಿಗೆ ಮಾಡುತ್ತಿದೆ ಎಂದು ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಅವರು ನೇರ ಆರೋಪ ಮಾಡಿದ್ದಾರೆ. ಮಂಡ್ಯದ ಸಂಸದರೂ ಆಗಿರುವ ಕುಮಾರಸ್ವಾಮಿ ಅವರು ನಿನ್ನೆ ಮಂಡ್ಯ ನಗರದ ಸಂಜಯ ವೃತ್ತದಲ್ಲಿ ಹೊಸದಾಗಿ ನಿರ್ಮಿಸಿರುವ ಸುಸಜ್ಜಿತ ಆಟೋ ನಿಲ್ದಾಣವನ್ನು ಉದ್ಘಾಟಿಸಿದ ಬಳಿಕ ರೈತ ಭವನದ ಬಳಿ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡುತ್ತಾ ರಾಜ್ಯ ಸರ್ಕಾರದ ವಿರುದ್ಧ ಇಂಥ ಆರೋಪ ಮಾಡಿದ್ದಾರೆ.

ದೀಪಾವಳಿ ಕೊಡುಗೆ ಎಂದರೆ ಏನೋ ನಮಗೆ ದೊಡ್ಡ ಕೊಡುಗೆಯನ್ನು ಕೊಡುತ್ತದೆ ಎಂದು ಜನರು ಭಾವಿಸಿದ್ದರು. ಮಾಧ್ಯಮಗಳಲ್ಲಿ ದೊಡ್ಡ ದೊಡ್ಡ ಜಾಹೀರಾತುಗಳನ್ನು ನೋಡಿ ನಾನು ಕೂಡ ಹಾಗೆಯೇ ಅಂದುಕೊಂಡಿದ್ದೆ. ಆದರೆ, ಅದು ದೀಪಾವಳಿ ಕೊಡುಗೆ ಹೆಸರಿನಲ್ಲಿ ಜನರಿಗೆ ಮಾಡುತ್ತಿರುವ ಮಹಾನ್ ದೋಖಾ.... ಎಂದು ಹೆಚ್‌ಡಿಕೆ ಕಿಡಿಕಾರಿದ್ದಾರೆ. ಬೆಂಗಳೂರು ನಗರದ ಜನರಿಗೆ ದೀಪಾವಳಿ ಕೊಡುಗೆ ಅಂದ್ರೆ, ಈ ಶಾಕ್... ಅದು ಹೇಗಿದೆ ಎಂದರೆ, ಬಿ ಖಾತಾದಿಂದ ಎ ಖಾತಾಗೆ ಪರಿವರ್ತನೆ ಮಾಡುವ ಅರ್ಜಿಗೆ 500 ರೂಪಾಯಿ ಶುಲ್ಕ ತುಂಬಬೇಕು. ಆ ಶುಲ್ಕದ ಹೆಸರಿನಲ್ಲಿಯೇ ನೂರಾರು ಕೋಟಿ ರೂಪಾಯಿ ಸುಲಿಗೆ ಮಾಡುತ್ತಿದೆ ಈ ಸರ್ಕಾರ. ಇನ್ನೂ 30ಸ40 ನಿವೇಶನಕ್ಕೆ 4 ರಿಂದ 8 ಲಕ್ಷ ರೂಪಾಯಿವರೆಗೂ ಕಿತ್ತುಕೊಳ್ಳುತ್ತಿದ್ದಾರೆ. ಮೊದಲು 10 ರಿಂದ 13 ಸಾವಿರ ರೂಪಾಯಿ ಅಷ್ಟನ್ನೇ ಕಟ್ಟಬೇಕಿತ್ತು. ಬೆಂಗಳೂರು ಜನರು ಇನ್ನು ಮುಂದೆ ಲಕ್ಷಗಳಲ್ಲಿ ಹಣ ತೆರಬೇಕಿದೆ. ಎ ಖಾತಾ ದಂಧೆಯ ಮೂಲಕ ರಾಜ್ಯ ಸರ್ಕಾರ 15,000 ಕೋಟಿ ರೂಪಾಯಿ ವಸೂಲಿ ಮಾಡುತ್ತಿದೆ. ಗ್ಯಾರಂಟಿ ಕೊಟ್ಟು ಜನರ ಬದುಕು ಹಸನು ಮಾಡೋದು ಎಂದರೆ ಹೀಗೆನಾ? ಜನರ ಮೇಲೆ ತೆರಿಗೆ ವಿಧಿಸಿ 6ನೇ ಗ್ಯಾರಂಟಿ ಕೊಡಲು ಹೊರಟಿದ್ದಾರೇನೋ.

ಕಾಂಗ್ರೆಸ್ ಸರ್ಕಾರ ಬಂದ ಮೇಲೆ ನಿರಂತರವಾಗಿ ಸುಲಿಗೆ ಮಾಡುತ್ತಿದೆ. ಕೇವಲ ಹಣ ಮಾಡುವುದಕ್ಕೆ ಸರ್ಕಾರ ಹೊರಟಿದೆ.ಗ್ಯಾರೆಂಟಿ ಯೋಜನೆಗಳಿಗೆ ದುಡ್ಡಿಲ್ಲ, ಹೀಗಾಗಿ, ಪ್ರತಿಯೊಂದರಲ್ಲಿಯು ದುಡ್ಡು ಮಾಡುವ ಬಗ್ಗೆಯಷ್ಟೇ ಆಲೋಚನೆ ಮಾಡುತ್ತಿದೆ ಎಂದು ಕಟುವಾಗಿ ಟೀಕಿಸಿದ್ದಾರೆ. ಬೆಂಗಳೂರಿನ ಗುಂಡಿ ಮುಚ್ಚೋದು ಇರಲಿ, ರಾಜ್ಯದಲ್ಲಿರುವ ಯಾವ ಗುಂಡಿಗಳನ್ನೂ ಮುಚ್ಚೋಕೆ ಇವರಿಂದ ಆಗುತ್ತಿಲ್ಲ.

ಸಿಎಂ ಸಿದ್ದರಾಮಯ್ಯಮೊನ್ನೆ ಹಾಸನಕ್ಕೆ ಹೋಗಿದ್ದಾಗ, ರಾಜ್ಯಕ್ಕೆ ಜೆಡಿಎಸ್ ಕೊಡುಗೆ ಏನು ಎಂದು ಪ್ರಶ್ನೆ ಮಾಡಿದ್ದಾರೆ. ಇವರ ಕೊಡುಗೆ ಏನು? ನನ್ನ ಆರೋಗ್ಯ ವಿಚಾರಿಸಲು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರೊಬ್ಬರು ದೆಹಲಿಗೆ ಬಂದಿದ್ದರು. 2018ರಲ್ಲಿ ನೀವು ಕೊಟ್ಟ 500 ಕೋಟಿ ರೂಪಾಯಿ ಅನುದಾನದಲ್ಲಿಯೇ ಇನ್ನೂ ಕೆಲಸ ನಡೆಯುತ್ತಿದೆ ಎಂದು ಅವರೇ ಹೇಳಿದರು. ಅನುದಾನದ ಬಗ್ಗೆ ಮಾತನಾಡುವ ಮುಖ್ಯಮಂತ್ರಿಗಳು,

ನಾನು ಅಧಿಕಾರದಲ್ಲಿ ಇದ್ದಾಗ ಎಷ್ಟು ಕೊಟ್ಟಿದ್ದೇನೆ, ಇವರು ಎಷ್ಟು ಕೊಟ್ಟಿದ್ದಾರೆ ಎಂಬ ಬಗ್ಗೆ ಜನರ ಮುಂದೆ ದಾಖಲೆ ಇಟ್ಟು ಮಾತಾಡಲಿ ಎಂದು ಸವಾಲು ಹಾಕಿದ್ದಾರೆ. ಸಿಎಂ ಸಿದ್ದರಾಮಯ್ಯ ಹೆಚ್‌ಡಿಕೆ ಅವರ ಸವಾಲನ್ನು ಸ್ವೀಕರಿಸುವರೇ? ತಮ್ಮ ಸರ್ಕಾರದ ಕೊಡುಗೆಯ ಎಲ್ಲಾ ದಾಖಲೆಯನ್ನು ಎತ್ತಿಟ್ಟುಕೊಂಡು ಕುಮಾರಸ್ವಾಮಿ ಜೊತೆ ಬೈಠಕ್ ಕೂರುವರೇ??

ಈ ನಡುವೆ ಡಿಸಿಎಂ ಡಿ.ಕೆ. ಶಿವಕುಮಾರ್ ಬೆಂಗಳೂರು ನಡಿಗೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಕೆ.ಆರ್. ಪುರಂ ಭಾಗದಲ್ಲಿ ರಸ್ತೆ ಒತ್ತುವರಿ ಪ್ರಕರಣಗಳು ಹೆಚ್ಚಿವೆ. ಒಬ್ಬೊಬ್ಬರು ಐದಾರು ನಿವೇಶಗಳಲ್ಲಿ ಅಕ್ರಮ ನಿರ್ಮಾಣಗಳನ್ನು ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅಕ್ರಮವಾಗಿ ಕಟ್ಟುವ ಕಟ್ಟಡಗಳನ್ನು ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ನೆಲಸಮ ಮಾಡಲಾಗುವುದು.

30X40 ಅಳತೆಯ ಕಟ್ಟಡಗಳಿಗೆ ಓಸಿಸಿಸಿ ವಿನಾಯಿತಿ ನೀಡಲಾಗಿದೆ. ಇದು ತಾತ್ಕಾಲಿಕ ವಿನಾಯಿತಿ. ಹೀಗಾಗಿ ಮುಂದೆ ಎಲ್ಲರೂ ಕಟ್ಟಡ ನಕ್ಷೆ ಅನುಮೋದನೆ ಪಡೆದುಕೊಳ್ಳಿ, ಕಡಿಮೆ ವಿಸ್ತೀರ್ಣದ ನಿವೇಶನದಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚು ಮಹಡಿಗಳನ್ನು ನಿರ್ಮಾಣ ಮಾಡುವುದು, ಸೆಟ್ ಬ್ಯಾಕ್ ಬಿಡದೆ ಒತ್ತೊತ್ತಾಗಿ ಮನೆ ಕಟ್ಟುವುದಕ್ಕೆ ಅವಕಾಶ ನೀಡುವುದಿಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಆಸ್ಪತ್ರೆ, ಅಕ್ರಮ ಭೂ ಒತ್ತುವರಿ, ಸಂತೆಯ ಸ್ಥಳಾಂತರ, ಸಂಚಾರ ದಟ್ಟಣೆ ನಿವಾರಣೆಗೆ ಮೇಲ್ಸೇತುವೆ, ಪಾದಚಾರಿ ಮೇಲ್ಸೇತುವೆ, ಸಿಸಿಟಿವಿ ಅಳವಡಿಕೆ ವಿಚಾರವಾಗಿ ಸಾರ್ವಜನಿಕರು ಬೇಡಿಕೆ ಇಟ್ಟಿದ್ದಾರೆ. ಈ ಎಲ್ಲಾ ವಿಚಾರಗಳಿಗೂ ನಾವು ಶೀಘ್ರ ಸ್ಪಂದಿಸಲಿದ್ದೇವೆ. ಪಾದಚಾರಿ ಮಾರ್ಗ ಒತ್ತುವರಿ ತಪ್ಪಿಸಲು ರಸ್ತೆ ಬದಿ ವ್ಯಾಪಾರಿಗಳಿಗೆ ತಳ್ಳುವ ಗಾಡಿ ನೀಡಲಾಗಿದೆ. ಶೇ.10-30 ರಷ್ಟು ಹಣ ಪಾವತಿಸಿದರೆ ವಾಹನ ನೀಡುವ ವ್ಯವಸ್ಥೆ ಪಾಲಿಕೆಯಲ್ಲಿದೆ. ನಗರದಲ್ಲಿ ಸುಮಾರು 30 ಸಾವಿರ ರಸ್ತೆ ವ್ಯಾಪಾರಿಗಳಿದ್ದಾರೆ. ಎಲ್ಲೆಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು ಎಂದು ನಾಗರಿಕರೊಬ್ಬರು ಮನವಿ ನೀಡಿದ್ದಾರೆ. ಇವೆಲ್ಲದಕ್ಕೂ ಪ್ರಮುಖ ಆದ್ಯತೆ ನೀಡಿ ಆದಷ್ಟು ಬೇಗ ಬಗೆಹರಿಸಲಾಗುವುದು ಎಂದು ತಿಳಿಸಿದ್ದಾರೆ.

ನಾನು ಈ ಹಿಂದೆ ನಗರಾಭಿವೃದ್ಧಿ ಸಚಿವನಾದ ಕಾಲದಿಂದಲೂ ಈ ಸಂತೆಯನ್ನು ನೋಡಿದ್ದೇನೆ. ಇದು ನೂರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಜನಸಂಖ್ಯೆ ಹೆಚ್ಚಳವಾದ ಕಾರಣಕ್ಕೆ ಈಗ ತೊಂದರೆಯಾಗುತ್ತಿದೆ. ಸಂತೆ ನಡೆಯುವ ಜಾಗವನ್ನು ನಾನು ಪರಿಶೀಲನೆ ಮಾಡುತ್ತೇನೆ ಹಾಗೂ ಅದನ್ನು ಎಲ್ಲಿಗೆ ಸ್ಥಳಾಂತರ ಮಾಡಬಹುದು ಎಂಬುದರ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ನಡಿಗೆ ವೇಳೆ ಸಾರ್ವಜನಿಕರಿಂದ ಬಂದ ಅಹವಾಲು, ದೂರನ್ನು ಶೀಘ್ರ ಬಗೆಹರಿಸುತ್ತೇವೆ. ಪಕ್ಷದ ಕಾರ್ಯಕರ್ತರ ಉತ್ಸಾಹದಿಂದ ಸಾರ್ವಜನಿಕರಿಗೆ ತೊಂದರೆಯಾಗಿದ್ದರೆ ನಾನು ಕ್ಷಮೆ ಕೇಳುತ್ತೇನೆ. ಕಾರ್ಯಕರ್ತರನ್ನು ನಾನು ಬೇರೆ ಸಂದರ್ಭದಲ್ಲಿ ಭೇಟಿ ಮಾಡುತ್ತೇನೆ. ಈ ಕಾರ್ಯಕ್ರಮದಲ್ಲಿ ಜನರಿಗೆ ಹೆಚ್ಚು ಅವಕಾಶ ಸಿಗಬೇಕು. ಇಂದು ನನ್ನ ಬಳಿ ತಮ್ಮ ಅಹವಾಲು ಹೇಳಿಕೊಳ್ಳಲು ಯಾರಿಗೆ ಸಾಧ್ಯವಾಗಿಲ್ಲವೋ ಅವರು, 1533 ಸಹಾಯವಾಣಿಗೆ ಸಂಪರ್ಕಿಸಿ, ನಿಮ್ಮ ಅಹವಾಲುಗಳನ್ನು ಸಲ್ಲಿಸಬಹುದು ಎಂದು ತಿಳಿಸಿದರು.

ಇಲ್ಲಿ ಜನರು ಹೇಳಿಕೊಂಡ ಅಹವಾಲುಗಳನ್ನು ಮಾಧ್ಯಮಗಳು ದಾಖಲಿಸಿಕೊಂಡಿವೆ. ಯಾರೆಲ್ಲಾ ನನ್ನೊಂದಿಗೆ ಸಮಸ್ಯೆ ಹೇಳಿಕೊಂಡಿದ್ದಾರೋ ಅವರ ಅಹವಾಲು ಹಾಗೂ ದೂರವಾಣಿ ಸಂಖ್ಯೆ ದಾಖಲಿಸಿಕೊಂಡಿದ್ದಾರೆ. ನಮ್ಮ ಅಧಿಕಾರಿಗಳು ಈ ಸಮಸ್ಯೆಗಳನ್ನು ಬಗೆಹರಿಸಿ ಅವರಿಗೆ ಮತ್ತೆ ಕರೆ ಮಾಡುತ್ತಾರೆ. ಈ ಸಮಸ್ಯೆಗಳನ್ನು ಹೇಗೆ ಬಗೆಹರಿಸಿದ್ದೇವೆ ಎಂಬ ವಿಚಾರವನ್ನು ನಾವು ತಿಳಿಸುತ್ತೇವೆ. ಕಾನೂನು ಪ್ರಕಾರವಾಗಿರುವುದನ್ನು ನಾವು ಪರಿಹಾರ ನೀಡಿ, ಅಗತ್ಯ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುತ್ತೇವೆ ಎಂದು ತಿಳಿಸಿದ್ದಾರೆ. ಈ ಹಿಂದೆ ಗ್ರಾಮ ವಾಸ್ತವ್ಯ ಫೇಮಸ್ ಆಗಿದ್ದಂತೆ, ಈಗ ನಡಿಗೆ ಉಪಯೋಗಕ್ಕೆ ಬಂದರೆ ಸಾಕು... ಏನಂತೀರಿ... **-ಸಂ.**

2 ☜

ಅದ್ಭುತ ಯಶಸ್ಸು ಸಾಧಿಸಿತ್ತು. ಪ್ರತಿ ವರ್ಷ ವಾರ್ಷಿಕೋತ್ಸವ ಆಚರಿಸಲಾಗಿತ್ತು. ಬಿ.ಆರ್. ಶೆಟ್ಟಿ, ಚಂದ್ರ ಶೇಖರ ಪಾಲೆತ್ತಾಡಿ ಅಂತಹ ದೊಡ್ಡ ಉದ್ಯಮಿಗಳೇ ಸಂಪಾದಕರ ಜೊತೆ ನಿಂತು ಸಂಭ್ರಮ ಆಚರಿಸುತ್ತಿದ್ದರು. ಅಂದು ಶುರುವಾದ ಪತ್ರಿಕೆ ಇಂದಿಗೂ ಹಿಂತಿರುಗಿ ನೋಡಿಲ್ಲ. ಯಶಸ್ವಿಯಾಗಿ ಪ್ರಸರಣ ಕಾಣುತ್ತಿದೆ. ಅಮೋಘ 31 ವರ್ಷದ ಯಶಸ್ವಿ ಪಯಣ. ಕಚೇರಿ ಮತ್ತು ಸಂಪಾದಕರು ಮಾತ್ರ ಬದಲಾಗಿದ್ದಾರೆ.



ಮುಂಬಯಿ ಕನ್ನಡಿಗರ ನೆಚ್ಚಿನ ದೈನಿ 'ಕರ್ನಾಟಕ ಮಲ್ಲ' 31ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ ಪತ್ರಿಕಾ ಕಚೇರಿಯಲ್ಲಿ ಹುಟ್ಟುಹಬ್ಬವನ್ನು ಆಚರಿಸಲಾಯಿತು.

2000– 01ರಿಂದ ಲಾಲ್ ಬಾಗ್ ಕ್ಷೇತ್ರದಲ್ಲಿ ಕಚೇರಿ ಆಗಿದೆ. ಚಂದ್ರಶೇಖರ ಪಾಲೆತ್ತಾಡಿ ಅವರ ನೇತೃತ್ವದಲ್ಲಿ, ಶ್ರೀನಿವಾಸ ಜೋಕಟ್ಟೆಯವರ ಬರಹದಲ್ಲಿ ಅದ್ಭುತವಾಗಿ ಮುನ್ನಡೆಯುತ್ತಿದೆ. ಅವರೆಲ್ಲ "ಕರ್ನಾಟಕ ಮಲ್ಲ" ಸಂಸ್ಥಾಪಕರಾದ ಮಲ್ಲಿಕಾರ್ಜುನಯ್ಯನವರನ್ನು ಸ್ಮರಿಸುತ್ತ ಮುನ್ನಡೆಯುತ್ತಿದ್ದಾರೆ. ಇಂತಹದೊಂದು ಸಂತಸಕರ ಸವಿನೆನಪನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವ ಭಾಗ್ಯ ಇಂದು ನಮ್ಮದಾಗಿದೆ.

**ಬಾಂಗ್ಲಾದೇಶದಿಂದ ಬಡ ಹೆಣ್ಣುಮಕ್ಕಳನ್ನು ಅಕ್ರಮವಾಗಿ ಗಡಿದಾಟಿಸಿ ಭಾರತಕ್ಕೆ ಕರೆತಂದು ವೇಶ್ಯಾವಾಟಿಕೆಗೆ ನೂಕುತ್ತಿದ್ದ ಜಾಲವೊಂದು ಇದೀಗ ಬೆಳಕಿಗೆ ಬಂದಿದ್ದು, ಈ ದಂಧೆಯ ಕಿಂಗ್ ಪಿನ್ 'ಗುರುಮಾ' ಎಂದೇ ಕರೆಯಲ್ಪಡುವ ತೃತೀಯಲಿಂಗಿ ಬಾಬು ಅಯಾನ್ ಖಾನ್ ಅಲಿಯಾಸ್ ಜ್ಯೋತಿ ಎಂಬಾಕೆಯನ್ನು ಬಂಧಿಸಲಾಗಿದೆ. ಈಕೆಯ ಬಂಧನದ ನಂತರ ರಾಷ್ಟ್ರಮಟ್ಟದಲ್ಲಿ ನಡೆಯುತ್ತಿದ್ದ ವೇಶ್ಯಾವಾಟಿಕೆಯ ರಹಸ್ಯವೊಂದು ಬಯಲಾದಂತಾಗಿದೆ. ಅಷ್ಟೇ ಅಲ್ಲದೆ ಬಾಂಗ್ಲಾದೇಶದ ಹೆಣ್ಣುಮಕ್ಕಳು ಮತ್ತು ತೃತೀಯಲಿಂಗಿಗಳು ಭಾರತವನ್ನು ಹೇಗೆ ಪ್ರವೇಶಿಸುತ್ತಾರೆ ಎಂಬ ಪ್ರಶ್ನೆಗೂ ಉತ್ತರ ಸಿಕ್ಕಂತಾಗಿದೆ.**




## ಬಾಂಗ್ಲಾ ಹುಡ್ಗೀರ್‌ನ ಗಡಿದಾಟಿಸಿ ಭಾರತದಲ್ಲಿ ಮಾರಾಟ ಮಾಡುತ್ತಿದ್ದ

# ಸ್ವಘೋಷಿತ ಗುರುಮಾ ಜ್ಯೋತಿ ಅರೆಸ್ಟ್!

✍ಬಿ.ಎಂ. ಲವಕುಮಾರ್

ಭಾರತದಲ್ಲಿ ನಡೆಯುವ ವೇಶ್ಯಾವಾಟಿಕೆಯಲ್ಲಿ ಬಾಂಗ್ಲಾ ಹೆಣ್ಣುಮಕ್ಕಳಿರುವುದು ಇವತ್ತು ನಿನ್ನೆಯದಲ್ಲ. ಈ ಜಾಲ ಇಡೀ ರಾಷ್ಟ್ರದಲ್ಲಿ ಹರಡಿದ್ದು, ದಿಲ್ಲಿಯಿಂದ ಹಳ್ಳಿವರೆಗೂ ವ್ಯಾಪಿಸಿದೆ. ಇವತ್ತು ಲಾಡ್ಜ್, ರೆಸಾರ್ಟ್, ಮನೆಗಳ ಮೇಲೆ ದಾಳಿ ನಡೆದಾಗಲೆಲ್ಲ ಬಾಂಗ್ಲಾ ಹುಡ್ಗೀರು ಸಿಕ್ಕಿ ಬೀಳುತ್ತಾರೆ. ಆದರೆ ಇವರೆಲ್ಲರೂ ಹೇಗೆ ಇಲ್ಲಿಗೆ ಬರುತ್ತಿದ್ದಾರೆ ಎಂಬುದು ಮಾತ್ರ ಮಿಲಿಯನ್ ಡಾಲರ್ ಪ್ರಶ್ನೆಯಾಗಿಯೇ ಉಳಿದಿದೆ. ಆದರೀಗ ಗುರುಮಾಳನ್ನು ಬಂಧಿಸಿದ ಬಳಿಕ ಆ ಪ್ರಶ್ನೆಗಳಿಗೆ ಉತ್ತರ ಸಿಕ್ಕಂತಾಗಿದೆ.

ಹೆಣ್ಣು ಮಕ್ಕಳನ್ನು ಬಾಂಗ್ಲಾದಿಂದ ಭಾರತಕ್ಕೆ ಕರೆ



ತಂದು ಅವರನ್ನು ಬಳಿಕ ವೇಶ್ಯಾವಾಟಿಕೆಗೆ ಮಾರಾಟ ಮಾಡುತ್ತಿರುವುದು ಹಿಂದಿನಿಂದಲೂ ನಡೆದು ಬಂದಿದೆ. ಹಣಕೊಟ್ಟು ಖರೀದಿಸುವ ದಂಧೆಕೋರರು ಬಳಿಕ ಅವರನ್ನಿಟ್ಟುಕೊಂಡು ದಂಧೆ ನಡೆಸುತ್ತಾರೆ. ಬಹಳಷ್ಟು ಹೆಣ್ಣುಮಕ್ಕಳು ಲಾಡ್ಜ್‌ಗಳಲ್ಲಿ ಬಂಧಿಯಾಗಿ ಗಿರಾಕಿಗಳಿಗೆ ಸೇವೆ ಸಲ್ಲಿಸುವುದರಲ್ಲಿಯೇ ಬದುಕು ಕಳೆದು ಹೋಗುತ್ತಿದೆ. ಇದೊಂದು ಅಮಾನವೀಯ ಕೃತ್ಯವಾಗಿದ್ದು, ಇದನ್ನು ತಡೆಯುವುದು ಕಷ್ಟವಾಗಿದೆ.

ಇವತ್ತು ಲಾಡ್ಜ್, ರೆಸಾರ್ಟ್, ಬಾಡಿ ಮಸಾಜ್, ಸ್ಪಾ ಸೆಂಟರ್, ಮಾಂಸದ ಮನೆ ಹೀಗೆ ಹಲವು ಸ್ಥಳಗಳಲ್ಲಿ ಬಾಂಗ್ಲಾದ ಯುವತಿಯರೇ ಹೆಚ್ಚು ಹೆಚ್ಚಾಗಿ ಕಾಣಸಿಗುತ್ತಿದ್ದಾರೆ. ಈ ಜಾಲದಲ್ಲಿ ಸಿಕ್ಕಿ ಬೀಳುವ ಹೆಣ್ಣು ಮಕ್ಕಳು ಆ ಪಾಪ ಕೂಪದಿಂದ ಹೊರಬರಲಾಗದೆ, ಮದ್ಯಪಾನ, ಧೂಮಪಾನ, ಡ್ರಗ್ಸ್ ಮುಂತಾದ ಚಟಗಳಿಗೆ ಬಲಿಯಾಗಿ ಬದುಕನ್ನೇ ಕಳೆದುಕೊಳ್ಳುತ್ತಾರೆ. ಇದೆಲ್ಲದಕ್ಕಿಂತ ಹೆಚ್ಚಾಗಿ ವೇಶ್ಯಾವಾಟಿಕೆ ಹೊರತು ಪಡಿಸಿ ಬೇರೆ ಯಾವುದನ್ನೂ ಮಾಡಲಾರದ ಪರಿಸ್ಥಿತಿಗೆ ಆ ಹೆಣ್ಣುಮಕ್ಕಳು ಬಂದು ತಲುಪಿ ಬಿಡುತ್ತಾರೆ.



ಇದರಿಂದ ತಮ್ಮ ಒತ್ತಡ ತಣಿಯಲು, ಮಾನಸಿಕ ನೆಮ್ಮದಿಗಾಗಿ ಮದ್ಯಪಾನ, ಡ್ರಗ್ಸ್‌ಗೆ ಮೊರೆ ಹೋಗಿ ಬಿಡುತ್ತಾರೆ. ಕೆಲವೊಮ್ಮೆ ಇವರು ದಂಧೆಯಲ್ಲಿ ತೊಡಗಿದಾಗ ಸಿಕ್ಕಿಬಿದ್ದರೂ ಫೈನ್ ಕಟ್ಟಿ ಅವರನ್ನು ಬಿಡಿಸಿಕೊಂಡು ಹೋಗಲೂ ವ್ಯವಸ್ಥೆಗಳಿದ್ದು, ಮತ್ತೆ ಅವರಿಂದ ಅದೇ ದಂಧೆ ಮಾಡಿಸುತ್ತಾರೆ. ಇದರಾಚೆಗೆ ಕೆಲವು ಹೆಣ್ಣುಮಕ್ಕಳಿಗೆ ಕೆಲಸ ಕೊಡಿಸುವ ಆಮಿಷವೊಡ್ಡಿ ಅವರಿಗೆ ಹೋಟೆಲ್, ರೆಸಾರ್ಟ್‌ಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಕರೆತಂದು ಬಳಿಕ ವಿಟಪುರುಷರ ಹಾಸಿಗೆಗೆ ಕಳುಹಿಸುವ ಪ್ರಕರಣಗಳು ಕೂಡ ನಡೆಯುತ್ತದೆ. ಇಲ್ಲಿ ಅವರು ಮೊದಲೇ ಮಾರಾಟವಾಗಿರುವ ವಿಚಾರಗಳು ಗೊತ್ತೇ ಆಗುವುದಿಲ್ಲ. ಅವರು ವೇಶ್ಯಾವಾಟಿಕೆ ದಂಧೆಕೋರರನ್ನು ತಲುಪುವ ಹೊತ್ತಿಗೆ ಹಲವು ಮಂದಿ ಇವರಿಂದ ಕಮೀಷನ್ ಪಡೆದುಕೊಂಡಿರುತ್ತಾರೆ.

ಇವತ್ತು ಬಾಂಗ್ಲಾದಿಂದ ಭಾರತಕ್ಕೆ ಹೆಣ್ಣು ಮಕ್ಕಳು, ಗಂಡು ಮಕ್ಕಳು ಎಲ್ಲರೂ ಸುಲಭವಾಗಿ ನುಸುಳಿ ಬರುತ್ತಿದ್ದಾರೆ. ಇವರು ಪಶ್ಚಿಮ ಬಂಗಾಳದ ಮೂಲಕವೇ ಬರುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಈ ಜಾಲವನ್ನು ಹತ್ತು ಹಲವು ಮಂದಿ ನಡೆಸುತ್ತಿದ್ದು, ಇದೀಗ ಗುರುಮಾ ಬಾಬು ಅಯಾನ್ ಖಾನ್ ಅಲಿಯಾಸ್ ಜ್ಯೋತಿ ಎಂಬ ತೃತೀಯ ಲಿಂಗಿ ಪೊಲೀಸರಿಗೆ ಸಿಕ್ಕಿ ಬೀಳುವ ಮೂಲಕ ಈ ದಂಧೆಯ ಹಿಂದಿನ ಕರಾಳತೆ ಬೆಳಕಿಗೆ ಬಂದಿದೆ. ಈಕೆ ಬಾಂಗ್ಲಾದವಳಾಗಿದ್ದು, ಭಾರತದಲ್ಲಿ ಕಳೆದ ಮೂರು ದಶಕಗಳಿಂದ ಅಕ್ರಮವಾಗಿ ವಾಸ ಮಾಡಿಕೊಂಡಿರುವುದರಲ್ಲದೆ, ಗುರುಮಾ ಎಂದೇ ಕರೆಯಿಸಿಕೊಳ್ಳುತ್ತಿದ್ದ ಈಕೆ ತಾನು ಭಾರತೀಯ ಪ್ರಜೆ ಎಂದು ಹೇಳಿಕೊಂಡು ಅದಕ್ಕಾಗಿ ನಕಲಿ ಪ್ರಮಾಣ ಪತ್ರ, ಪ್ಯಾನ್ ಕಾರ್ಡ್, ಆಧಾರ್ ಕಾರ್ಡ್‌ಗಳನ್ನ ನಕಲು ಮಾಡಿಕೊಂಡು ಆಧ್ಯಾತ್ಮಿಕ ನಾಯಕಿಯಂತೆ ಫೋಸ್ ಕೊಡುತ್ತಿದ್ದಳು. ಆದರೆ ಈಕೆಯ ವ್ಯವಹಾರ ಮಾತ್ರ ಮಾನವ ಸಾಗಾಣಿಕೆಯಾಗಿತ್ತು.

ಈಕೆಗೆ ಸುಮಾರು ಮುನ್ನೂರಕ್ಕೂ ಹೆಚ್ಚು ಅನುಯಾಯಿಗಳಿದ್ದರು ಎನ್ನಲಾಗಿದೆ. ಮೇಲ್ನೋಟಕ್ಕೆ ಧರ್ಮ ದೇವರು ಎನ್ನುತ್ತಿದ್ದ ಗುರುಮಾ ಧ್ಯಾನ, ಭಜನೆ ಆಚೆಗೆ ಮಾಡುತ್ತಿದ್ದದ್ದು ಮಾತ್ರ ಮಾಂಸ ದಂಧೆಯಾಗಿತ್ತು. ಈಕೆ ಇದುವರೆಗೆ ಅದೆಷ್ಟು ಹೆಣ್ಣು ಮಕ್ಕಳಿಗೆ ನರಕ ತೋರಿಸಿದ್ದಾಳೋ ಗೊತ್ತಿಲ್ಲ. ಆದರೆ ಪಾಪದ ಕೊಡ ಎನ್ನುವುದು ಇದ್ದೇ ಇದೆಯಲ್ಲ. ಹೀಗಾಗಿ ಅದು ತುಂಬಿದ್ದರಿಂದ ಸಿಕ್ಕಿ ಬಿದ್ದಿದ್ದಾಳೆ. ಮೇಲ್ನೋಟಕ್ಕೆ ಈಕೆ ಸುಮಾರು ಇನ್ನೂರಕ್ಕೂ ಹೆಚ್ಚು ಹೆಣ್ಣು ಮಕ್ಕಳನ್ನು ಬಾಂಗ್ಲಾದಿಂದ ಕರೆತಂದು ಭಾರತದಲ್ಲಿ ಮಾರಾಟ ಮಾಡಿದ್ದಾಳೆ ಎನ್ನಲಾಗಿದೆ.

ಇನ್ನು ಗುರುಮಾಳ ದಂಧೆಯ ಜಾಲವೂ ಗಟ್ಟಿಯಾಗಿ ಬೇರೂರಿದ್ದು, ಈಕೆ ಗೋವಂಡಿಯ ರಫೀಕ್ ನಗರದಲ್ಲಿ 20ಕ್ಕೂ ಹೆಚ್ಚು ಮನೆಗಳನ್ನು ಹೊಂದಿದ್ದಳು. ಇವಳ ಅನುಯಾಯಿಗಳು ಎಂದು ಹೇಳುತ್ತಿದ್ದವರು ಮಾಡುತ್ತಿದ್ದ ಕಿರಿಕ್ ಮತ್ತು ಅನೈತಿಕ ವ್ಯವಹಾರಗಳು, ಇಷ್ಟೇ ಅಲ್ಲದೆ ಮುಂಬೈನ ಶಿವಾಜಿ ನಗರ, ನಾರ್ಪೋಲಿ, ದೇವನಾರ್, ಟ್ರೊಂಬೇ ಮತ್ತು ಕುರ್ಲಾ ಪೊಲೀಸ್ ಠಾಣೆಗಳಲ್ಲಿ ದಾಖಲಾದ ಹಲ್ಲೆ ಮತ್ತು ಸಾರ್ವಜನಿಕ ಗಲಭೆಗಳಿಗೆ ಸಂಬಂಧಿಸಿದ ದೂರುಗಳು ಸೇರಿದಂತೆ ಹಲವು ಪ್ರಕರಣಗಳು ಗುರುಮಾ ಅಲಿಯಾಸ್ ಜ್ಯೋತಿ ಮೇಲಿತ್ತು. ಹೀಗಾಗಿ ಪೊಲೀಸರು ಆಕೆಯ ಮೇಲೆ ಕಣ್ಣಿಟ್ಟಿದ್ದರು.




ಸ್ವಘೋಷಿತ ಗುರುಮಾ ಆಗಿದ್ದ ಬಾಬು ಅಯಾನ್ ಖಾನ್ ಅಲಿಯಾಸ್ ಜ್ಯೋತಿಯ ಆಶೀರ್ವಾದ ಪಡೆಯಲು ಹಲವರು ಸರತಿಸಾಲಿನಲ್ಲಿ ನಿಲ್ಲುತ್ತಿದ್ದರು. ಇನ್ನೊಂದೆಡೆ ಭಯೋತ್ಪಾದನಾ ನಿಗ್ರಹ ಘಟಕ (ಎಟಿಎಸಿ) ತಂಡವು ಈ ಹಿಂದೆ ಮಾರ್ಚ್ 24 ರಂದು ಶಿವಾಜಿ ನಗರದ ರಫೀಕ್ ನಗರ ಪ್ರದೇಶದಿಂದ ಎಂಟು ಬಾಂಗ್ಲಾದೇಶದ ತೃತೀಯಲಿಂಗಿಗಳನ್ನು ಬಂಧಿಸಿತ್ತು. ಆ ಕಾರ್ಯಾಚರಣೆಯ ಸಮಯದಲ್ಲಿ, ಜ್ಯೋತಿ ವಿಚಾರ ಬಂದಿತ್ತು. ಆಕೆ ಭಾರತೀಯ ಪ್ರಜೆ ಎಂದು ಹೇಳಿಕೊಂಡು ಜೀವನ ಸಾಗಿಸುತ್ತಿದ್ದಳು ಅದಕ್ಕಾಗಿ ನಕಲಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದಳು. ಇಷ್ಟೇ ಅಲ್ಲದೆ ಹೆಣ್ಣು ಮಕ್ಕಳು ಹಾಗೂ ತೃತೀಯ ಲಿಂಗಿಗಳನ್ನು ಬಾಂಗ್ಲಾದಿಂದ ಕರೆತಂದು ತನ್ನ ಮನೆಯಲ್ಲಿಟ್ಟುಕೊಂಡು ಅವರನ್ನು ದಂಧೆಗೆ ಕಳುಹಿಸಿ ಅವರಿಂದ ತಿಂಗಳಿಗೆ ಇಂತಿಷ್ಟು ಹಣ ಪಡೆಯುತ್ತಿದ್ದಳು. ಅವರಿಗೆ ಕೊಲ್ಕತ್ತಾದಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸುವ ಕೆಲಸ ನಡೆಯುತ್ತಿತ್ತು ಎಂಬುದು ಅವತ್ತು ಪೊಲೀಸರಿಗೆ ಗೊತ್ತಾಗಿತ್ತು.

ಪೊಲೀಸರಿಗೆ ಸಿಕ್ಕ ಮಾಹಿತಿಯಂತೆ ಗುರುಮಾ ಮಾನವ ಕಳ್ಳಸಾಗಣೆಯನ್ನು ಪಶ್ಚಿಮ ಬಂಗಾಳದ ಮುರ್ಶಿದಾಬಾದ್ ಗಡಿಯ ಮೂಲಕ ಮಾಡುತ್ತಿದ್ದಳು. ಇತ್ತೀಚೆಗೆ ಬಾಂಗ್ಲಾದಿಂದ ಹೆಣ್ಣುಮಕ್ಕಳು ಸೇರಿದಂತೆ ಹಲವರನ್ನು ಭಾರತಕ್ಕೆ ದಾಟಿಸಿದ್ದಳು. ಭಾರತದ ಒಳಗೆ ಪ್ರವೇಶಿಸಿದ ಅವರಿಗೆ ಕೊಲ್ಕತ್ತಾದಲ್ಲಿ ನಕಲಿ ಜನನ ಪ್ರಮಾಣಪತ್ರಗಳು ಮತ್ತು ಶಾಲೆಯಿಂದ ನೀಡುವ ಪ್ರಮಾಣಪತ್ರಗಳನ್ನು ತಯಾರಿಸಿ ಆ ನಂತರ ಅವರನ್ನು ಮುಂಬೈಗೆ ಕರೆತಂದು ಶಿವಾಜಿ ನಗರದಲ್ಲಿ ಇರಿಸಲಾಗಿತ್ತು. ಪ್ರತಿ ಕೊಠಡಿಯಲ್ಲಿ 3-4 ಜನರಿದ್ದು, ಗುರು ಮಾತೆಗೆ ತಿಂಗಳಿಗೆ 5,000-10,000 ರೂಪಾಯಿಯನ್ನು ಅವರು ಕೊಡಬೇಕಾಗುತ್ತಿತ್ತು.

ಪೊಲೀಸರ ಪರಿಶೀಲನೆಯ ನಂತರ ಗುರುಮಾಳ ಮುಖವಾಡ ಬಯಲಾಗಿದ್ದು, ಜ್ಯೋತಿ ಸಲ್ಲಿಸಿದ ದಾಖಲೆಗಳು ನಕಲಿ ಎಂದು ಕಂಡು ಬಂದಿದೆ, ಹೀಗಾಗಿ ಆಕೆಯನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ ಅನಘಾ ಶಾತವಾಸೆ ಹೇಳಿದ್ದಾರೆ. ಆದರೆ ಬಂಧನದ ಸುದ್ದಿ ಹರಡಿದಾಗ, ಅನುಯಾಯಿಗಳು ಶಿವಾಜಿನಗರ ಪೊಲೀಸ್ ಠಾಣೆಯ ಹೊರಗೆ ಜಮಾಯಿಸಿ, ಆಕೆಯ ಬಿಡುಗಡೆಗೆ

☞13



# ನಾನು ಹೀಗೇ ಸಾಯಬೇಕಾ..... ಜೈಲಿನಲ್ಲಿ ದರ್ಶನ್ ಕೂಗಾಟ!



ನಾನು ಹೀಗೆ ಸಾಯಬೇಕಾ, ನನಗೆ ಯಾಕೆ ಈ ಶಿಕ್ಷೆ? ನಾನು ಯಾರಿಗೆ ಅನ್ಯಾಯ ಮಾಡಿದೆ? ಎಂದು ನಟ ದರ್ಶನ್ ಕಿರುಚಾಡಿದ ಘಟನೆ ನಡೆದಿದೆ.

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್ ಹಾಗೂ ಆತನ ಗ್ಯಾಂಗ್ ಸಂಕಷ್ಟ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜೈಲು ಸೌಲಭ್ಯಗಳ ಕುರಿತು ತೀವ್ರ ಅಸಮಾಧಾನ ವ್ಯಕ್ತಪಡಿಸಿ ದೂರು ನೀಡಿದ್ದ ನಟ ದರ್ಶನ್‌ಗೆ ಮತ್ತೆ ಹಿನ್ನಡೆಯಾಗಿದೆ. ಜೈಲಿನಲ್ಲಿ ನಟ ದರ್ಶನ್‌ಗೆ ನೀಡುತ್ತಿರುವ ಕನಿಷ್ಠ ಸೌಲಭ್ಯ ವಿಚಾರವಾಗಿ ಕಾನೂನು ಪ್ರಾಧಿಕಾರದ ವರದಿಯಿಂದ ಕೋಲಾಹಲ ಸೃಷ್ಟಿಯಾಗಿದೆ. ಈ ವರದಿ ದರ್ಶನ್ ವಿರುದ್ಧವಾಗಿದೆ ಎಂದು ಹೇಳಿದ್ದೇ ತಡ, ಸೆಲ್‌ನಲ್ಲಿ ನಟ ದರ್ಶನ್ ಕೂಗಾಡಿದ ಘಟನೆ ನಡೆದಿದೆ. ನಾನು ಯಾರಿಗೆ ಅನ್ಯಾಯ ಮಾಡಿದ್ದೇನೆ, ನನಗೆ ಯಾಕೆ ಈ ಶಿಕ್ಷೆ, ನಾನು ಹೀಗೆ ಜೈಲಿನಲ್ಲೇ ಸಾಯಬೇಕಾ ಎಂದು ನಟ ದರ್ಶನ್ ರಂಪಾಟ ಮಾಡಿದ್ದಾರೆ.



**ಸಹಚರರ ಜೊತೆ ರಂಪಾಟ...**

ಜೈಲಿನಲ್ಲಿ ನಟ ದರ್ಶನ್‌ಗೆ ಕನಿಷ್ಠ ಸೌಲಭ್ಯ ಒದಗಿಸಲಾಗುತ್ತಿಲ್ಲ ಅನ್ನೋ ಆರೋಪದ ಸತ್ಯಾಸತ್ಯೆ ಅರಿಯಲು ಕಾನೂನು ಪ್ರಾಧಿಕಾರ ತನಿಖೆ ನಡೆಸಿ ಮೊನ್ನೆ ಕೋರ್ಟ್ ಗೆ ವರದಿ ನೀಡಿತ್ತು. ಈ ವರದಿ ದರ್ಶನ್‌ಗೆ ವಿರುದ್ದವಾಗಿದೆ ಎಂದು ನಟ ದರ್ಶನ್‌ಗೆ ಆಪ್ತರು ತಮ್ಮ ಮ್ಯಾನೇಜರ್ ಹೇಳಿದ್ದಾರೆ.

ಈ ಮಾತು ಕೇಳಿಸಿಕೊಂಡು ನಟ ದರ್ಶನ್ ಗರಂ ಆಗಿದ್ದಾರೆ. ನನಗೆ ಆಗುತ್ತಿರುವ ಸಮಸ್ಯೆ, ಇಲ್ಲಿನ ಕನಿಷ್ಠ ಸೌಲಭ್ಯಗಳ ಕುರಿತು ದೂರು ನೀಡಿದ್ದೇನೆ. ಆದರೆ ಈ ವರದಿ ನನ್ನ ವಿರುದ್ಧವಾಗಿದೆ ಎಂದರೆ ಏನು? ಎಲ್ಲರಿಗೂ ನನ್ನ ಕೈಲಾದಷ್ಟು ಸಹಾಯ ಮಾಡಿದ್ದೇನೆ. ಆದರೆ ನನಗೆ ಯಾಕೆ ಈ ರೀತಿ ಶಿಕ್ಷೆ, ನಾನು ಹೀಗೆ ಸಾಯಬೇಕಾ.... ಎಂದು ದರ್ಶನ್ ಜೈಲಿನಲ್ಲಿ ಸಹ ಖೈದಿಗಳ ಜೊತೆ ಕೂಗಾಡಿದ್ದಾರೆ.

ದರ್ಶನ್ ಕೋಪ ನೋಡಿ ಶಾಕ್ ಆದ ಸಹಚರರು ನಟ ದರ್ಶನ್ ಜೈಲಿನಲ್ಲಿ ಇಷ್ಟು ದಿನ ತೀವ್ರ ತಾಳ್ಮೆ ವಹಿಸಿದ್ದರು, ಆದರೆ ವರದಿ ಅವರ ವಿರುದ್ಧವಾಗಿದೆ ಎಂದಾಗ ತಾಳ್ಮೆ ಕಳೆದುಕೊಂಡಿದ್ದಾರೆ. ದರ್ಶನ್ ಮ್ಯಾನೇಜರ್ ನಾಗರಾಜ್ ನಟನ ಸಮಾಧಾನ ಮಾಡಲು ಪ್ರಯತ್ನ ಮಾಡಿದ್ದಾರೆ. ಇತರರು ಬಾಸ್ ಕಡೆ

**ಬೆಂಗಳೂರು**

**✍ ಹೆಚ್.ಕೆ. ಮಹದೇವ್**

ನೋಡಲು ಸಾಧ್ಯವಾಗದೆ.. ಅಲ್ಲಿಂದ ಹೋಗಲೂ ಆಗದೆ ಪರದಾಡಿದ್ದಾರೆ. ಕೋರ್ಟ್ ಸೂಚನೆ ಮೇರೆಗೆ ಜೈಲಿಗೆ ಧಾವಿಸಿ ತನಿಖೆ ನಡೆಸಿ ರಿಪೋರ್ಟ್ ಬರೆದ ಕಾನೂನು ಪ್ರಾಧಿಕಾರದ ವರದಿ ತನ್ನ ಪರವಾಗಿಲ್ಲ ಎಂಬುದನ್ನು ತಿಳಿದು ಗರಂ ಆದ ನಟ ದರ್ಶನ್ ಕೆಲ ಹೊತ್ತು ಸಹಚರರು ಸೇರಿದಂತೆ ಹಲವರೊಂದಿಗೆ ಗರಂ ಆಗಿ ಕಿರುಚಾಡಿದ್ದಾರೆ. ಕೆಲ ಹೊತ್ತಿನ ಬಳಿಕ ದರ್ಶನ್ ಸೈಲೆಂಟ್ ಆಗಿದ್ದಾರೆ. ಬಳಿಕ ಯಾರೊಂದಿಗೆ ಬೆರೆಯದೇ ಒಂಟಿಯಾಗಿ ಕುಳಿತಿದ್ದಾರೆ. ಇದೇ ವೇಳೆ ವಕೀಲರ ಜೊತೆ ಮಾತನಾಡಬೇಕು ಎಂದು ದರ್ಶನ್ ಹೇಳಿದ್ದಾರೆ.

**ಮಾನವ ಹಕ್ಕುಗಳ ಮೊರೆ ಹೋಗಲು ನಿರ್ಧಾರ...**

ನಟ ದರ್ಶನ್ ಜೈಲಿನಲ್ಲಿ ಆಕ್ರೋಶ ಹೊರ ಹಾಕಿದ್ದಾರೆ. ಹೊರಬರುವ ದಾರಿಗಳೆಲ್ಲಾ ಬಂದ್ ಆಗಿದ್ದು ಇದೀಗ ಪ್ರತಿ ವರದಿಗಳು ದರ್ಶನ್ ವಿರುದ್ಧ ವಾಗಿ ಬರುತ್ತಿದೆ. ಇದರಿಂದ ದರ್ಶನ್ ಕೋಪ ಮತ್ತಷ್ಟು ಹೆಚ್ಚಾಗಿದೆ. ಅವರು ಇದೀಗ ಮಾನವ ಹಕ್ಕುಗಳ ಮೊರೆ ಹೋಗಲು ನಿರ್ಧರಿಸಿದ್ದರೆ. ಈ ಕುರಿತು ವಕೀರಲ ಜೊತೆ ಚರ್ಚಿಸಿ ನಿರ್ಧಾರ ತೆಗೆದು ಕೊಳ್ಳಲು ಮುಂದಾಗಿದ್ದಾರೆ. ಸೋಮವಾರ ಈ ಕುರಿತು ಅರ್ಜಿ ಸಲ್ಲಿಸುವ ಸಾಧ್ಯತೆ ಇದೆ. ಈ ನಡುವೆ ಇನ್ನೊಂದು ಸಂಗತಿ ಹೊಗೆ ಆಡುತ್ತಿದೆ. ಅದೇನೆಂದರೆ, ದರ್ಶನ್ ತಮ್ಮ ಪಕ್ಷ ಸೇರಿದರೆ ಅತನನ್ನು ರಕ್ಷಿಸುವ ಬಗ್ಗೆ ರಾಷ್ಟ್ರ ರಾಜಕೀಯ ಪಕ್ಷದಲ್ಲಿ ಚಿಂತನೆ ನಡೆಯು ತ್ತಿದೆಯಂತೆ! ಇನ್ನೊಂದೆಡೆ, ಸ್ವತಃ ದರ್ಶನ್ ಅವರೇ ತಾವೇ ಒಂದು ಪಕ್ಷ ಸ್ಥಾಪಿಸಿ ರಾಜಕೀಯ ಅಖಾಡಕ್ಕೆ ಧುಮುಕಲು ಯೋಚಿಸುತ್ತಿದ್ದಾರಂತೆ! ಇದು ನಿಜವೇ?!

**ದರ್ಬಾರ್ ಫೋಟೋ ಹಿಂದಿನ ಅಸಲಿಯತ್ತು....**

ಹೋದ ವರ್ಷ ಪರಪ್ಪನ ಅಗ್ರಹಾರದಲ್ಲಿ ನಟ ದರ್ಶನ್‌ಗೆ ವಿಶೇಷ ಆತಿಥ್ಯ ನೀಡಿದ್ದ ಫೋಟೋ ವೈರಲ್ ಆದ ಬೆನ್ನಲ್ಲೇ ದರ್ಶನ್ ಅನ್ನು ಬಳ್ಳಾರಿ ಜೈಲಿಗೆ ಸ್ಥಳಾಂತರಿಸಲಾಗಿತ್ತು. ಸದರಿ ಫೋಟೋ ಹಿಂದಿನ ಅಸಲಿಯತ್ತು ಇದೀಗ ನಡೆದ ತನಿಖೆಯಿಂದ ಬಯಲಾಗಿದೆ. ವಿಲ್ಸನ್ ಗಾರ್ಡನ್‌ನ ನಾಗನ ಜತೆ ಕುಳಿತು ಟೀ ಪಾರ್ಟಿ ಮಾಡಿದ್ದ ಫೋಟೋವನ್ನು ನಾಗನ ದೋಸ್ತ್ ಡಬಲ್ ಮೀಟರ್ ಮೋಹನನೆ ತೆಗೆದಿದ್ದು, ಜೈಲಿನ ಹೊರಗಡೆಯ ತನ್ನ ಗ್ಯಾಂಗ್‌ಗೆ ಶೇರ್ ಮಾಡಿದ್ದ! ವಿಲ್ಸನ್ ಗಾರ್ಡನ್ ನಾಗನ ಆಪ್ತ ಸಹಚರನಾದ ಮೋಹನ ಸೇರಿ 21 ಮಂದಿ ಸಿದ್ದಾಪುರ ಮಹೇಶ ಹತ್ಯೆ ಕೇಸ್‌ನಲ್ಲಿ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ.



ಕೊಲೆ ಕೇಸ್‌ನಲ್ಲಿ ಆರೋಪಿಯಾಗಿ ಜೈಲಿನಲ್ಲಿದ್ದ ದರ್ಶನ್, ನಾಗನ ಜತೆ ಟೀ ಪಾರ್ಟಿ ಮಾಡಿದ್ದರು. ಈ ವೇಳೆ ಬ್ಯಾರಕ್ ಸಮೀಪದಲ್ಲಿದ್ದ ಮೋಹನ ಮೊಬೈಲ್ ನಲ್ಲಿ ಫೋಟೊ ತೆಗೆದಿದ್ದ. ಈ ಫೋಟೋವನ್ನು ಜೈಲಿನ ಹೊರಗಡೆ ಯಿರುವ ತನ್ನ ಗ್ಯಾಂಗ್ ಸಹಚರರಿಗೆ ವಾಟ್ಸಾಪ್ ಮಾಡಿ 'ನಾಗಣ್ಣ ನೋಡಿ ಬಾಸ್ ಜತೆ ಇದ್ದಾರೆ' ಎಂದು ಬಿಲ್ಡಪ್ ಕೊಟ್ಟಿದ್ದ. ಈ ಮೂಲಕ ಜೈಲಿಂದ ಹೊರಬಂದ ಪೋಟೊ ವೈರಲ್ ಆಗಿತ್ತು ಎಂದು ಪೊಲೀಸ್ ಮೂಲಗಳು ಹೇಳಿವೆ. ಆ ಫೋಟೊ ವೈರಲ್ ಆದ ಬಳಿಕ ತನಿಖೆಯ ಬಿಸಿ ತನಗೂ ತಟ್ಟಲಿದೆ ಎಂದು ಕಂಗಾಲಾಗಿದ್ದ ಮೋಹನ, ಮೊಬೈಲ್ ಅನ್ನು ಜಜ್ಜಿ ಪುಡಿ ಪುಡಿ ಮಾಡಿ ಬಾತ್ ರೂಂನಲ್ಲಿ ಹಾಕಿ ನೀರು ಫ್ಲಶ್ ಮಾಡಿ ಸಾಕ್ಷಿ ನಾಶ ಮಾಡಿರುವುದು ತನಿಖೆಯಲ್ಲಿ ವೇದ್ಯವಾಗಿದೆ. ಆದರೆ ಜೈಲಿನಲ್ಲಿರುವ ಮೋಹನನಿಗೆ ಆಂಡ್ರಾಯ್ಡ್ ಮೊಬೈಲ್ ತಲುಪಿಸಿದ್ದು ಯಾರು? ಎಂಬುದರ ಬಗ್ಗೆ ಇನ್ನೂ ತನಿಖೆ ಮುಂದುವರಿದಿದೆಯಂತೆ! ಇನ್ನೊಂದೆಡೆ, ನಟ ದರ್ಶನ್‌ಗೆ ಬೆಂಗಳೂರು ಜೈಲಿನಲ್ಲಿ ವಿಶೇಷ ಸತ್ಕಾರ ನೀಡಿದ್ದು ಜೈಲು ಪೊಲೀಸರೇ! ಎಂಬುದು ಕೂಡ ಸತ್ಯ.... ದರ್ಶನ್ ಜೈಲು ಅಧಿಕಾರಿಗಳಿಗೆ ಕೋಟಿ ಕೋಟಿ ದುಡ್ಡು ಚೆಲ್ಲಿದ್ದು,ಅದನ್ನು ಆತ ಬಳ್ಳಾರಿಗೆ ತೆರಳೋ ಸಂದರ್ಭದಲ್ಲಿ ಹೋಂ ಮಿನಿಸ್ಟರ್ ಮುಂದೆಯೇ ಹಲುಬಿಕೊಂಡಿದ್ದ!

**ಚಪ್ಪಲಿಯಲ್ಲಿ ಸಿಂತೆಟಿಕ್ ಡ್ರಗ್ಸ್....**

ಪರಪ್ಪನ ಅಗ್ರಹಾರ ಜೈಲಿನಲ್ಲಿ ಸೈಯದ್ ಸುಹೈಲ್ ಎಂಬಾತ ವಿಚಾರಣಾಧೀನ ಕೈದಿಯಾಗಿದ್ದಾನೆ. ಕಳೆದ ಸೆಪ್ಟೆಂಬರ್ ರಂದು ಸುಹೈಲ್ ಭೇಟಿಗೆ ಪಾಸ್ ಪಡೆದಿದ್ದ ಕೆ.ಜಿ.ಹಳ್ಳಿಯ ಶಬ್ಬೀರ್ ಎಂಬಾತ ಮಧ್ಯಾಹ್ನ 12.30ರ ಸುಮಾರಿಗೆ ಜೈಲಿನ ಬಳಿ ಆಗಮಿಸಿದ್ದ. ಕಾರಾಗೃಹ ಪ್ರವೇಶ ದ್ವಾರದ ಗೇಟ್-1ರಲ್ಲಿ ಬ್ಯಾಗ್ ಹಿಡಿದು ಬಂದಿದ್ದ ಶಬ್ಬೀರ್ ನಡವಳಿಕೆ ಅನುಮಾನಾಸ್ಪದವಾಗಿತ್ತು.ಈ ನಿಟ್ಟಿನಲ್ಲಿ ತಪಾಸಣೆಗೆ ನೇಮಕಗೊಂಡಿರುವ ಕೆಎಸ್‌ಐಎಸ್‌ಎಫ್ ಸಿಬ್ಬಂದಿ ಶಬ್ಬೀರ್ ಬಳಿಯಿದ್ದ ಬ್ಯಾಗ್ ಪಡೆದು ಪರಿಶೀಲಿಸಿದ್ದರೂ ಯಾವುದೇ ಅನುಮಾನಾಸ್ಪದ ವಸ್ತು ಸಿಕ್ಕಿರಲಿಲ್ಲ.

ಶಬ್ಬೀರ್ ತಂದಿದ್ದ ಬ್ಯಾಗ್‌ನಲ್ಲಿ ಒಂದು ಜತೆ ಹೊಸ ಚಪ್ಪಲಿಯಿತ್ತು. ಚಪ್ಪಲಿಯನ್ನು ಸೂಕ್ಷ್ಮವಾಗಿ

☞ 10

# ಜೈಲ್ ಸೂಪರಿಂಡೆಂಟೆಂಟ್ ಬ್ಲಾಕ್‌ಮೇಲ್?!

ಹೌದು ಇದು ಸತ್ಯ, ಈಗ ನಿತ್ಯ ಸಜಾ ಬಂದಿಗಳು, ಜೀವಾವದಿ ಶಿಕ್ಷೆಗೊಳಪಟ್ಟು ಹದಿನೈದು ವರ್ಷಗಳಿಂದ ಜೈಲಿನಲ್ಲೇ ಕೊಳೆಯುತ್ತಾ... ಸೀನಿಯರ್ ಕಂಟ್ರೋಲರ್ ಗಳಾಗಿರುವ ಜೈಲೊಳಗಿನ ರಿಂಗ್ ಮಾಸ್ಟರ್‌ಗಳು, ಬೆಂಗಳೂರಿನ ಭೂಗತ ಪ್ರಪಂಚದ ಹಾಲೀ-ಮಾಜೀ ಡಾನ್‌ಗಳು, ರೇಣುಕಾ ಸ್ವಾಮಿ ಕೊಲೆ ಕೇಸ್ ಆರೋಪಿ ದರ್ಶನ್ ಅವರ ಲಾಯರ್‌ಗಳು....ಮುಂತಾದವರೆಲ್ಲ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಸುರೇಶ್ ಅವರಿಗೆ ಬ್ಲಾಕ್‌ಮೇಲ್ ಮಾಡಿಕೊಂಡು ಬರುತ್ತಿದ್ದಾರೆ ಎಂಬ ಗಾಳಿ ಸುದ್ದಿ ಸಾರ್ವಜನಿಕ ವಲಯದಲ್ಲಿ ಹಬ್ಬಿದ್ದು, ಇನ್ ಫಾರ್ಮರ್ಸ್ ಮೂಲಕ ಮಾಧ್ಯಮಗಳ ಕಛೇರಿಗೆ ಬಂದು ತಲುಪುತ್ತಿವೆ!

ಈ ಗುಸುಗುಸು ಗಾಸಿಪ್ಪೇ ಕೆಲ ಮಾಧ್ಯಮಗಳಲ್ಲಿ ಬಿಸಿಬಿಸಿ 'ಬ್ರೇಕಿಂಗ್ ನ್ಯೂಸ್' ಆಗಿದೆ! ಇಂಥ ಗಾಳಿ ಸುದ್ದಿ ಎಲ್ಲೆಡೆ ಹರಿದಾಡಲು ಕಾರಣ, ಸೈಕೋ ರೇಪಿಸ್ಟ್ ಉಮೇಶ್ ರೆಡ್ಡಿಯ ಒಂದಷ್ಟು ವೀಡಿಯೋ ತುಣುಕುಗಳು ರಹಸ್ಯವಾಗಿ ಚಿತ್ರಣವಾಗಿದ್ದು, ಅವು ಕೆಲವರ ಪೆನ್ ಡ್ರೈವ್‌ಗಳಲ್ಲಿ ಮಗುಮ್ಮಗಿ ಅಡಗಿದ್ದಾವೆ ಎನ್ನಲಾಗುತ್ತಿದೆ!

ನಿಮಗೆಲ್ಲ ಗೊತ್ತಿರುವಂತೆ, ಭಾರತದ ಮೋಸ್ಟ್ ನಟೋರಿಯಸ್ ಸೀರಿಯಲ್ ರೇಪಿಸ್ಟ್ ಬಳ್ಳಾರಿ ಮೂಲದ ಉಮೇಶ್ ರೆಡ್ಡಿ. ಈತನ ವಿರುದ್ಧ ಕರ್ನಾಟಕ, ಮಹಾರಾಷ್ಟ್ರ,



ಗುಜರಾತ್ ಸೇರಿದಂತೆ ಹಲವಾರು ರಾಜ್ಯಗಳಲ್ಲಿ ಇಸವಿ 1996 ರಿಂದ 2002ರವರೆಗೆ ಸುಮಾರು 20 ಮಹಿಳೆಯರ ಮೇಲೆ ಅತ್ಯಾಚಾರ ಮಾಡಿ, ಸುಮಾರು 18 ಜನರನ್ನು ಕೊಂದಿರುವುದಾಗಿ ದೂರುಗಳು ದಾಖಲಾಗಿವೆ. ಇದನ್ನೆಲ್ಲಾ ತಾನೇ ಒಪ್ಪಿಕೊಂಡು ಮರಣದಂಡನೆ ಶಿಕ್ಷೆ ಗೊಳಗಾಗಿದ್ದ ನಟೋರಿಯಸ್ ರೇಪಿಸ್ಟ್ ಉಮೇಶ್ ರೆಡ್ಡಿಯನ್ನು ಬೆಳಗಾವಿ ಜೈಲಿನಲ್ಲೇ ನೇಣಿಗೇರಿಸಬೇಕಾಗಿತ್ತು. ಆಸಾಮಿ ತಾನು ಹುಚ್ಚ ಎಂದು ಬಿಂಬಿಸಿಕೊಂಡು ಮರಣದಂಡನೆಯಿಂದ ತಪ್ಪಿಸಿಕೊಳ್ಳಲು ಸೈಕೋ ಡ್ರಾಮಾ ಮಾಡಿ ಜೈಲು ಪೊಲೀಸ್‌ರನ್ನೇ ಕನ್‌ಫ್ಯೂಸ್ ಮಾಡುತ್ತಿದ್ದನಂತೆ! ಕೊನೆಗೆ, ಆತನನ್ನು ಬೆಂಗಳೂರು ನಿಮ್ಹಾನ್ಸ್ ಆಸ್ಪತ್ರೆಗೆ ಕರೆತಂದು ಆತನ ಮೆದುಳನ್ನು ಮೆಡಿಕಲ್ ಚೆಕಪ್ ಮಾಡಿದಾಗ ರೇಪಿಸ್ಟ್ ರೆಡ್ಡಿಯ

☞ 10

# ಜೈಲುವಾಸ ಆಯ್ಕೆ ಮಾಡಿಕೊಂಡದ್ದು ನಾನೇ ಎಂದ ಡಿಸಿಎಂ ಡಿಕೆಶಿ!






ಮಹದೇವ್ ಕೆಂಪಯ್ಯ

ಸಮ್ಮಿಶ್ರ ಸರ್ಕಾರ ಬಿದ್ದು ಹೋಗುವ ವೇಳೆ, ಕೆಲ ದ್ರೋಹಿಗಳು ಪಕ್ಷ ಬಿಟ್ಟು ಹೋದಾಗ, ಒಂದಷ್ಟು ಶಾಸಕರ ಮನ ಒಲಿಸಿ ಇಲ್ಲೇ ಒಂದೆಡೆ ಇರಿಸಿದ್ದೆ. ಅಂಥ ವೇಳೆ ಡಿಸಿಎಂ ಆಗುವ ಅಥವಾ ಜೈಲಿಗೆ ಹೋಗುವ ಆಪ್ಷನ್ ಇಟ್ಟಿದ್ದರು! ನಾನು ಪಕ್ಷ ನಿಷ್ಠನಾಗಿ ಜೈಲುವಾಸ ಆಯ್ಕೆ ಮಾಡಿಕೊಂಡೆ.... ಇಂತಹದ್ದೊಂದು ರಹಸ್ಯ ಸ್ಫೋಟಿಸಿದ್ದು ಬೇರಾರು ಅಲ್ಲ, ಡಿಸಿಎಂ ಡಿ.ಕೆ. ಶಿವಕುಮಾರ್!

ಬೆಂಗಳೂರಿನ ಗಾಂಧಿನಗರದ ಎಫ್‌ಕೆಸಿಸಿಐ ಸಭಾಂಗಣದಲ್ಲಿ ನಿನ್ನೆ ಬುಧವಾರ ನಡೆದ ಕೆ.ಎಂ.ರಘು ಬರೆದಿರುವ 'ಡಿ.ಕೆ. ಶಿವಕುಮಾರ್' ಅಭಿನಂದನಾ ಗ್ರಂಥದ ಬಿಡುಗಡೆ ಸಮಾರಂಭದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಹೀಗೆ ಹೇಳಿದ್ದಾರೆ.

ಸಮ್ಮಿಶ್ರ ಸರ್ಕಾರದಲ್ಲಿ ಹತ್ತು ಜನ ಶಾಸಕರು ರಾಜಿನಾಮೆ ನೀಡಲು ಹೊರಟಿದ್ದರು. ಕನಕಪುರದಲ್ಲಿದ್ದ ನಾನು ಬೆಂಗಳೂರಿಗೆ ಬಂದು ಐದಾರು ಜನರನ್ನು ವಾಪಸ್ ಕ್ವಾಟ್ರಸ್‌ಗೆ ಕರೆದುಕೊಂಡು ಬಂದೆ. ಆಗ ನನಗೆ ಒಬ್ಬ ಆದಾಯ ತೆರಿಗೆ ಆಡಿಟರ್ ಫೋನ್ ನಿಂದ ಕರೆ ಬಂದಿತ್ತು. ನನ್ನ ಜೊತೆ ಡಿಜಿಯೂ ಇದ್ದರು.ಡಿ.ಕೆ. ಸುರೇಶ್ ಅವರೂ ಇದ್ದರು. ಅವರು ದೂರವಾಣಿ ಕರೆಯಲ್ಲಿ ಮಾತನಾಡಿದರು. ನನಗೆ ಕರೆ ಮಾಡಿದವರು, ನೀವು ಡಿಸಿಎಂ ಆಗುವಿರಾ ಅಥವಾ ಜೈಲಿಗೆ ಹೋಗುವಿರಾ ಎಂದು ಕೇಳಿದರು. ಎಲ್ಲಾ ಶಾಸಕರನ್ನು ವಾಪಸ್ಸು ಕರೆದುಕೊಂಡು ಬನ್ನಿ ಎಂದು ಆಯ್ಕೆ ನೀಡಿದ್ದರು

ಆಗ ನಾನು ನನಗೆ ಇಷ್ಟೆಲ್ಲಾ ಸ್ಥಾನಮಾನ ನೀಡಿರುವ ಪಕ್ಷವನ್ನು ಬಿಡುವುದಿಲ್ಲ, ಬೇಕಾದರೆ ಜೈಲಿಗೆ ಹೋಗುತ್ತೇನೆ ಎಂದೆ... ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ರಾಜೀವ್ ಗಾಂಧಿ ಅವರು ನನಗೆ ಟಿಕೆಟ್ ನೀಡಿ ಮಂತ್ರಿ ಮಾಡಿದ್ದರು. ಬಂಗಾರಪ್ಪನವರು ನನಗೆ ಸಹಕಾರ ನೀಡಿದ್ದರು. ಈ ಪಕ್ಷದಿಂದ ಈ ಮಟ್ಟಕ್ಕೆ ಬೆಳೆದಿದ್ದೇನೆ.... ಹೀಗಾಗಿ, ಅವತ್ತು ಜೈಲನ್ನೇ ಆಯ್ಕೆ ಮಾಡಿಕೊಂಡೆ. ಅಂದು ನಾನು ಬೇರೆನೇ ಆಯ್ಕೆ ಮಾಡಿದ್ದರೆ ಏನೇನು ಆಗುತ್ತಿತ್ತೋ ಗೊತ್ತಿಲ್ಲ ಎಂದಿದ್ದಾರೆ! ಶಾಲಾ ಚುನಾವಣೆಯಲ್ಲಿಯೇ ಅನೇಕ ಒತ್ತಡಗಳಿಂದ ನನಗೆ ಬೇರೆ ಸ್ಥಾನ ನೀಡಲಾಗಿತ್ತು

ನಾನು ವಿದ್ಯಾರ್ಥಿ ದಿಸೆಯಿಂದಲೇ ರಾಜಕೀಯ ನಾಯಕನಾಗಬೇಕು ಎನ್ನುವ ಅಭಿಲಾಷೆ ಹೊಂದಿದ್ದವನು. ಮೌಂಟ್ ಕಾರ್ಮೆಲ್ ಶಾಲಾ ಚುನಾವಣೆಯಲ್ಲಿ ಗೆದ್ದಿದ್ದ ನನಗೆ ಅಂದೇ ಅನೇಕ ಒತ್ತಡಗಳಿಂದ ಪ್ರತ್ಯೇಕ ಸ್ಥಾನ ನೀಡಲಾಯಿತು

ಚುನಾವಣೆಯ ಕೌಂಟಿಂಗ್ ಪ್ರತಿನಿಧಿಯಾಗಿದ್ದ ನನ್ನ ಸಹಪಾಠಿ ಮಾಧವ ನಾಯಕ್ ನೀನು 400 ಮತಗಳಿಂದ ಗೆಲ್ಲುತ್ತೀಯಾ ಎಂದಿದ್ದನು. ಆದರೆ ಬೆಳಿಗ್ಗೆ ಫಲಿತಾಂಶ ಘೋಷಣೆ ಮಾಡುವಾಗ ಬೇರೆ ಯಾವುದೋ ಹುಡುಗಿಯ ಹೆಸರನ್ನು ಘೋಷಣೆ ಮಾಡಲಾಯಿತು. ನನಗೆ ಪ್ರತ್ಯೇಕವಾಗಿ ಕ್ರೀಡಾ ಕಾರ್ಯದರ್ಶಿ ಹುದ್ದೆ ನೀಡಲಾಯಿತು.

ರಾಜಕಾರಣದಲ್ಲಿಯೂ ಸುಮಾರು ಶೇ.80 ರಷ್ಟು ಜನ ದುಡಿಯುತ್ತಲೇ ಇದ್ದಾರೆ. ಶೇ.20 ರಷ್ಟು ಜನರಿಗೆ ಮಾತ್ರ ಸಣ್ಣಪುಟ್ಟ ಸ್ಥಾನಮಾನ ಸಿಕ್ಕಿದೆ. ನನಗೂ 63 ವರ್ಷವಾಯಿತು. ನಾವುಗಳೇ ಇನ್ನೆಷ್ಟು ದಿನ ರಾಜಕಾರಣ ಮಾಡಲು ಸಾಧ್ಯ. ಹೊಸಬರು ಬರಬೇಕು. ಐದು ಪಾಲಿಕೆಗಳು ಮಾಡಿದ ಕಾರಣಕ್ಕೆ ಬೆಂಗಳೂರಿನಲ್ಲಿ



ಹೊಸದಾಗಿ 500ಕ್ಕೂ ಹೆಚ್ಚು ನಾಯಕರು ಬೆಳಕಿಗೆ ಬರಲಿದ್ದಾರೆ ಎಂಬಿತ್ಯಾದಿಯಾಗಿ ತಮ್ಮ ಮನದಾಳವನ್ನು ಬಿಚ್ಚಿಟ್ಟಿದ್ದಾರೆ.

**ನಾನು ಜಾತ್ಯತೀತ ತತ್ವದಲ್ಲಿ ಬೆಳೆದವನು**

ನಾನು ಜಾತ್ಯಾತೀತ ತತ್ವದಲ್ಲಿ ಬೆಳೆದವನು. ಸದನದಲ್ಲಿ ಆರ್‌ಎಸ್‌ಎಸ್ ಬಗ್ಗೆ ತಿಳಿದಿದೆ ಎಂದಷ್ಟೇ ಹೇಳಿದ್ದೆ.... ಅದನ್ನೇ ದೊಡ್ಡದಾಗಿ ಬಿಂಬಿಸಲಾಯಿತು. ಕಾರ್ಯಕರ್ತರಿಗೆ ಹಾಗೂ ನನ್ನನ್ನು ನಂಬಿಕೊಂಡವರಿಗೆ ನೋವಾಗಬಾರದು ಎಂದು ನಾನು ಏನೂ ಮಾತನಾಡಲಿಲ್ಲ, ನಾನು ಪುಸ್ತಕ ಓದುವವನಲ್ಲ, ಶಾಲೆ, ಕಾಲೇಜುಗಳಲ್ಲಿ ಓದಲಿಲ್ಲ, ಅಂದಿನಿಂದಲೂ ರಾಜಕಾರಣ ಮಾಡಿಕೊಂಡು ಬೆಳೆದವನು ನಾನು. ಅಂತಿಮ ಪದವಿ ಓದುವಾಗ ಟಿಕೆಟ್ ದೊರೆಯಿತು. ಇದನ್ನು ಯಾರೂ ಸಹ ಊಹಿಸಲೂ ಸಾಧ್ಯವಿಲ್ಲ ಅಂದಿನಿಂದ ಎಂಟು ಬಾರಿ ಶಾಸಕನಾಗಿ ಇಂದು ಉಪ ಮುಖ್ಯಮಂತ್ರಿಯಾಗಿದ್ದೇನೆ ಎಂದಿದ್ದಾರೆ.

**ನಾನು ರಾಜೀವ್ ಗಾಂಧಿ ಅವರ ಮಾತಿನ ಮೇಲೆ ನಂಬಿಕೆ ಇಟ್ಟವನು**

ಈ ಪುಸ್ತಕ ರಾಜಕೀಯದಲ್ಲಿ ಬೆಳೆಯಬೇಕು ಎನ್ನುವವರಿಗೆ ಒಂದಷ್ಟು ಮಾರ್ಗದರ್ಶನ ನೀಡಬಹುದು. ಏಕೆಂದರೆ ನಾನು ರಾಜೀವ್ ಗಾಂಧಿ ಅವರ ಮಾತಿನ ಮೇಲೆ ನಂಬಿಕೆ ಇಟ್ಟವನು. ಹಿಂಬಾಲಕರನ್ನ ಸೃಷ್ಟಿಸಬೇಡಿ ನಾಯಕರನ್ನು ಸೃಷ್ಟಿಸಿ ಎನ್ನುವ ಮಾತನ್ನು ಹೆಚ್ಚು ನಂಬುವವನು.

ನಾನು ಇಷ್ಟು ಎತ್ತರಕ್ಕೆ ಬೆಳೆಯಲು ನನ್ನ ಕ್ಷೇತ್ರದ ಜನತೆ ಹಾಗೂ ಪಕ್ಷದ ಕಾರ್ಯಕರ್ತರು ಕಾರಣ. ತಿಹಾರ್ ಜೈಲಿಗೆ ನನ್ನ ಮೇಲೆ ಷಡ್ಯಂತ್ರ ಮಾಡಿ ಕಳುಹಿಸಿದಾಗಲೂ ಈ ಜನ ನನ್ನ ಜೊತೆ ನಿಂತಿದ್ದಾರೆ. ಲಕ್ಷಾಂತರ ಜನರು, ತಾಯಂದಿರು ಹರಕೆ ಕಟ್ಟಿಕೊಂಡು ನನ್ನ ಪರವಾಗಿ ಪ್ರಾರ್ಥನೆ ಮಾಡಿದ್ದರು. ಎಲ್ಲರ ಹರಕೆ, ಹಾರೈಕೆಯಿಂದ ನಾನು ನಿಮ್ಮ ಮುಂದೆ ನಿಂತಿದ್ದೇನೆ ಎಂದಿದ್ದಾರೆ.

**ಟೀಕೆಗಳನ್ನು ಮುಕ್ತವಾಗಿ ಸ್ವೀಕರಿಸುವೆ**

ನಾನು ಟೀಕೆಗಳನ್ನು ಮುಕ್ತವಾಗಿ ಸ್ವೀಕಾರ ಮಾಡುತ್ತೇನೆ. ಸ್ನೇಹಿತರು ಟೀಕೆ ಮಾಡುತ್ತಾರೆ. ವೈರಿಗಳು ನನ್ನ ಬಗ್ಗೆ ಇಲ್ಲ ಸಲ್ಲದ ಸಂಗತಿಗಳನ್ನು ಕಟ್ಟಿ ಮಾತನಾಡುತ್ತಾರೆ. ಆಪಾದನೆಗಳನ್ನು ಮಾಡುತ್ತಾರೆ. ಆದರೂ ನಾನು ಸಂತೋಷದಿಂದ ಕೇಳಿಸಿಕೊಳ್ಳುತ್ತೇನೆ.

ದೇವೇಗೌಡರು, ಕುಮಾರಸ್ವಾಮಿ ವಿರುದ್ಧ ರಾಜಕೀಯ ಮಾಡಿದ್ದೇನೆ, ಜಾತ್ಯಾತೀತತೇ ಉಳಿಯಬೇಕು ಎನ್ನುವ ಕಾರಣಕ್ಕೆ, ಹೈಕಮಾಂಡ್ ಹೇಳಿದಕ್ಕೆ ಅವರ ಕೈ ಹಿಡಿದು ಮೇಲಕ್ಕೆತ್ತಿ ಮುಖ್ಯಮಂತ್ರಿ ಮಾಡಿದ್ದೇವೆ. ನನ್ನ ಮನಸ್ಸು ಒಪ್ಪಿತೋ ಇಲ್ಲವೋ ಬೇರೆ ವಿಚಾರ. ಆದರೆ ಪಕ್ಷದ ಮಾತಿಗೆ ನಿಷ್ಠನಾಗಿ ನಡೆದುಕೊಂಡೆ. ನಾನು ಜೈಲಿಗೆ ಹೋದ ತಕ್ಷಣ ನಾವೇನಾದರೂ ದುಡ್ಡು ಹೊಡೆಯಲು ಹೇಳಿದ್ದೆವೆಯೇ ಎನ್ನುವ ಮಾತನ್ನೂ ಇದೇ ಕಿವಿಯಲ್ಲಿ ಕೇಳಿದ್ದೇನೆ ಎಂದಿದ್ದಾರೆ.

**ಈ ಪುಸ್ತಕದಲ್ಲಿ 99%ರಷ್ಟು ಸತ್ಯ ಸಂಗತಿಗಳು ಕಾಣುತ್ತಿವೆ**

ಈ ಪುಸ್ತಕದ ಲೇಖಕ ರಘು ನನಗೆ ಪರಿಚಿತನಲ್ಲ, ಪುಸ್ತಕ ಬರೆಯುತ್ತೇನೆ ಎಂದು ನನ್ನ ಅನುಮತಿ ಕೂಡ ಪಡೆದಿಲ್ಲ, ನನ್ನ ಬಳಿ ಹತ್ತು ನಿಮಿಷವಾದ್ರೂ ಮಾತನಾಡಿಲ್ಲ. ಆದರೆ ತನ್ನದೇ ಆದ ಮಾದರಿಯಲ್ಲಿ ಸಂಶೋಧನೆ ಮಾಡಿದ್ದಾರೆ. ನನ್ನ ಭಾಷಣಗಳು ಸೇರಿದಂತೆ ಇತರೇ ಮಾತುಗಳನ್ನು ಕೇಳಿ ಮಾಹಿತಿ ಸಂಗ್ರಹ ಮಾಡಿದ್ದಾರೆ. ಇದರಲ್ಲಿ ಶೇ.99 ರಷ್ಟು ಸತ್ಯ ಸಂಗತಿಗಳು ಕಾಣುತ್ತಿವೆ.

ಮೈಸೂರಿನ ರಮ್ಯ ಎಂಬ ಪಿಎಚ್‌ಡಿ ವಿದ್ಯಾರ್ಥಿನಿ ನನ್ನ ಬಗ್ಗೆ ಕಳೆದ ಆರೇಳು ವರ್ಷಗಳಿಂದ ಸಂಶೋಧನೆ ನಡೆಸಿ ಡಾಕ್ಟರೇಟ್ ಪಡೆದಿದ್ದಾರೆ. ಆಕೆ ಸಹ ನನ್ನ ಬಗ್ಗೆ ಬರೆದಿರುವ ಪುಸ್ತಕ ಬಿಡುಗಡೆಗೆ ಬಂದಿಲ್ಲ, ಈ ಪುಸ್ತಕ ಬಿಡುಗಡೆಗೆ ಹೋಗುತ್ತಿದ್ದೀರಿ ಎಂದು ಬೇಸರಿಸುತ್ತಿದ್ದಳು. ನನ್ನ ಬಗ್ಗೆ ಅತ್ಯುತ್ತಮವಾಗಿ ಸಂಶೋಧನೆ ನಡೆಸಿ ರಘು ಅವರು ಪುಸ್ತಕ ಬರೆದಿದ್ದಾರೆ. ನನ್ನ ಬಗ್ಗೆ ತಿಳಿದುಕೊಳ್ಳಲು, ನನ್ನ ಹೆಜ್ಜೆಗಳನ್ನು ಅರಿಯಲು ಈ ಪುಸ್ತಕ ನೆರವಾಗುತ್ತದೆ. ನನ್ನ ಶ್ರಮ, ಫಲವನ್ನು ಈ ಪುಸ್ತಕದ ಮೂಲಕ ತಿಳಿದುಕೊಳ್ಳಬಹುದು ಎಂದಿದ್ದಾರೆ.

ಹೀಗೆ, ಮುಖ್ಯ ಅತಿಥಿಯಾಗಿ ಭಾಷಣ ಮಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು, ಪುಸ್ತಕ ಬಿಡುಗಡೆ ಸಮಾರಂಭ ಮುಗಿದ ನಂತರ ಮಾಧ್ಯಮಗಳ ಜೊತೆ ಮಾತನಾಡುತ್ತ, ಜಾತಿಗಣತಿಗೆ ಮಾಹಿತಿ ನೀಡುವುದಿಲ್ಲ ಎನ್ನುವ ಸುಧಾಮೂರ್ತಿ ಅವರ ಹೇಳಿಕೆಯ ಬಗ್ಗೆ ಕೇಳಿದಾಗ, ಯಾರನ್ನೂ ಮಾಹಿತಿ ನೀಡಿ ಎಂದು ಬಲವಂತ ಮಾಡಲು ಆಗುವುದಿಲ್ಲ, ಇದು ಅವರ ಇಚ್ಚೆ ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದ್ದಾರೆ. ☯

## ಲೇಖಕ ಕೆ.ಎಂ.ರಘು ಸಿನಿಮಾ ನಿರ್ದೇಶಕರು...

ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಕುರಿತು ಅವರದ್ದೇ ಹೆಸರಿನಲ್ಲಿ ಅಭಿನಂದನೀಯ ಗ್ರಂಥವನ್ನೇ ಪ್ರಕಟಿಸಿರುವ ಲೇಖಕ ಕೆ.ಎಂ. ರಘು ಚಲನಚಿತ್ರ ನಿರ್ದೇಶಕರು. ಸ್ಯಾಂಡಲ್‌ವುಡ್‌ನಲ್ಲಿ ಹಿರಿ ತಲೆಗಳ ಬಳಿ ಬಹಳಷ್ಟು ವರ್ಷ ಅಸಿಸ್ಟೆಂಟ್ ಆಗಿ ದುಡಿದು ನಂತರ ಸ್ವತಂತ್ರ ನಿರ್ದೇಶಕರಾಗಿರೋ ರಘು ಅವರು, ತರ್ಲೆ ವಿಲೇಜ್, ದೊಡ್ಡಹಟ್ಟಿ ಬೋರೇಗೌಡ, ಪರಸಂಗ, ಜಸ್ಟ್ ಪಾಸ್ ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಇಷ್ಟು ಬ್ಯುಸಿ ಶೆಡ್ಯೂಲ್ ನಡುವೆಯೂ ಡಿ.ಕೆ.ಶಿ. ಅವರ ಮೇಲಿನ ಪ್ರೀತಿ ಗೌರವದಿಂದ 'ಡಿ.ಕೆ. ಶಿವಕುಮಾರ್' ಪುಸ್ತಕವನ್ನು ಬರೆದಿದ್ದಾರೆ! ☯














# ಡೆತ್ ನೋಟ್ ಬಯಲಿಗೆಳೆದ ಆತ್ಮಹತ್ಯೆಯ ರಹಸ್ಯ!



ನನ್ನ ಹೆಸರು ಅಭಿಷೇಕ್ ನಾನು ಗವರ್ನ್‌ಮೆಂಟ್ ಲೇಡಿ ಗೋಷನ್ ಲಾಲ್‌ಭಾಗ್, ಹಾಸ್ಪಿಟಲ್‌ನಲ್ಲಿ ಬಯೋಮೆಡಿಕಲ್ ಆಗಿ ಕಾರ್ಯನಿರ್ವಹಿಸುತ್ತಿರುತ್ತೇನೆ. ನನ್ನ ಊರು ನಿಟ್ಟೆ ಪರಪಾಡಿ.

ನನ್ನ ಸಾವಿಗೆ ಕಾರಣ ಆದವರು :

ನಿರೀಕ್ಷಾ : ಎಲ್‌ಜಿಎಚ್ ಅನ್‌ವಾರ್ಡ್ ನರ್ಸ್ ಊರು ಕಳಸ ಮತ್ತು ಬೆದ್ರ.

ರಾಕೇಶ್ : ಊರು ಗುರುಪುರ ಕೈಕಂಬ (ಮನೇಲ್) ಕೆಲಸ ನಂದಿನಿ ಡೈರಿ ಕುಲಶೇಖರ.

ರಾಹುಲ್ : ಊರು ಕಂಕನಾಡಿ.

ತಸ್ಲಿಂ : ಊರು ಗುರುಪುರ ಕೈಕಂಬ.

ಈ ಮೇಲಿನ ನಾಲ್ಕು ಜನ ಹಾಗೂ ಇನ್ನಿತರರು ಸೇರಿ ಹಣಕ್ಕಾಗಿ ನನಗೆ ತುಂಬಾನೆ ಕಿರುಕುಳ ಮಾಡಿದ್ದಾರೆ, ಮಾಡುತ್ತಲೇ ಇರುತ್ತಾರೆ. ನಾನು ನೆಮ್ಮದಿಯಾಗಿ ಬದುಕಲು ಇವರುಗಳು ಬಿಡುತ್ತಿಲ್ಲ. ಮಾನಸಿಕವಾಗಿ ಹಾಗೂ ದೈಹಿಕವಾಗಿ ತುಂಬಾನೇ ಹಿಂಸೆ ನೀಡಿದ್ದಾರೆ ಹಾಗೂ ಕೊಲೆ ಮಾಡಿ ನನ್ನನ್ನು ರೋಡಿನಲ್ಲಿ ಎಸೆಯುತ್ತಾರೆ ಎಂದು ಬೆದರಿಕೆಯನ್ನು ಹಾಕಿದ್ದಾರೆ.

ನನ್ನ ರೂಮ್‌ಮೇಟ್ ಪೇಜ್‌ಕುಮಾರ್ ಅವರ ತಂದೆ ತಾಯಿಯ ಬಳಿ ನಾನು ಈ ಪತ್ರದ ಮೂಲಕ ಕ್ಷಮೆ ಕೋರುತ್ತೇನೆ. ಆ ದಿನ ನಾನು ಮತ್ತು ನಿರೀಕ್ಷಾ ಹಾಗೂ ತೇಜು ಮತ್ತು ಅವನ ಗೆಳತಿ ನಮ್ಮ ಬಜ್ಜೋಡಿ ಬಿಕರ್ನಕಟ್ಟೆ ರೂಮ್‌ಗೆ ಹೋಗಿದ್ದೆವು. ಆಗ ನಿರೀಕ್ಷಾ ಹಿಡನ್ ಕ್ಯಾಮೊ ಮೂಲಕ ತೇಜುನಾ ಅಶ್ಲೀಲ ಫೋಟೋಗಳನ್ನು ಕ್ಲಿಕ್ ಮಾಡಿ ಮತ್ತು ವಿಡಿಯೋ ಮಾಡಿ ಅದನ್ನು ಇಟ್ಟುಕೊಂಡು ತೇಜುವಿನ ಬಳಿ 5 ಲಕ್ಷ ಹಣ ನೀಡುವಂತೆ ಬೇಡಿಕೆ ಮಾಡಿದ್ದಳು. ಬಟ್ ತೇಜು ಅವರ ಮನೆ ಕೆಲಸ ನಡೆಶಿದ್ದ ಕಾರಣ ಹಣ ಇಲ್ಲ ಎಂದು ನಿರೀಕ್ಷಾನ ಬಳಿ ತುಂಬಾನೇ ಅಂಗಲಾಚಿದ್ದಾನೆ. ನನಗೆ ಎಲ್ಲ ವಿಷಯ ಗೊತ್ತಿದ್ದು ಏನೂ ಮಾಡಲು ಆಗಲಿಲ್ಲ ಏಕೆಂದರೆ ನಾನು ನಿರೀಕ್ಷಾ ವಿರುದ್ಧ ನಿಂತರೆ ಎಲ್ಲಿ ನಾವು ರೂಮ್‌ಗೆ ಹೋದ ವಿಷಯ ಎಲ್ಲರಿಗೂ ಗೊತ್ತಾಗುತ್ತೆ ಅಂತ ನಾನೇ ತೇಜುವಿಗೆ ಹಣ ನೀಡು ಇಲ್ಲವಾದರೆ ಎಲ್ಲರ ಮರ್ಯಾದೆ ಹೋಗುತ್ತೆ ಅಂತ ಹೇಳಿದ್ದೆ, ಅದಾದ ನಂತರ ತೇಜು ನಿರೀಕ್ಷಾಳಿಗೆ ಹಣ ಕೊಡುತ್ತೇನೆ ಎಂದು ಒಪ್ಪಿದ. ಬಟ್ ನಂತರ 3-4 ದಿನಗಳ ಬಳಿಕ ತೇಜು ಕಾಣೆಯಾದ ಇವತ್ತಿನವರೆಗೂ ತೇಜುವಿಗೆ ಏನಾಯಿತು ಎಂದು ಯಾರಿಗೂ ಗೊತ್ತಿಲ್ಲ.

**ದಕ್ಷಿಣ ಕನ್ನಡ**

**✍ ಮೋಹನ್ ಬೋಳಂಗಡಿ**

ನಿರೀಕ್ಷಾ ಮತ್ತು ಇವಳ ತಂಡ ಕೆಲವು ಹುಡುಗಿಯರ ಬೆತ್ತಲೆ (Nude) ಮತ್ತು ಡ್ರೆಸ್ ಚೇಂಜ್ ಮಾಡುವ ಫೋಟೋ ತೆಗೆದು ಅವರಿಗೆ ಗೊತ್ತಿಲ್ಲದೆ ಹಿಡನ್ ಕ್ಯಾಮೊದಲ್ಲಿ ತೆಗೆದು ಅದನ್ನು ಹಣಕ್ಕಾಗಿ ತಸ್ಲಿಂಗೆ ಸೆಂಡ್ ಮಾಡಿ ಅಲ್ಲಿಂದ ಅವನು ಹೊರದೇಶದ ಸ್ನೇಹಿತರಿಗೆ ಕಳುಹಿಸುತ್ತಿದ್ದ.

ನಿರೀಕ್ಷಾ ತನ್ನ ರೂಮೇಟ್ ಅಂಜಲಿ ಹಾಗೂ ಸ್ವಾತಿಯ ಫೋಟೋಗಳನ್ನು ಕಳುಹಿಸಿದ್ದಾಳೆ ಮತ್ತು ಕೆಲವು ನರ್ಸಿಂಗ್ ಸ್ಟಾಫ್‌ಗಳ ಫೋಟೋವನ್ನು ಕಳುಹಿಸಿದ್ದಾಳೆ.

ಇವೆಲ್ಲ ವಿಷಯ ನನಗೆ ಅವಳ ವಾಟ್ಸಪ್ ವೆಬ್ ಮೂಲಕ ಸಿಕ್ಕಿದೆ. ನಾನು ಅವಳಿಗೆ ಗೊತ್ತಿಲ್ಲದೆ ಅವಳ ವಾಟ್ಸಪ್ ವೆಬ್ ಕನೆಕ್ಟ್ ಮಾಡಿದ್ದೆ. ಅದರಿಂದ ನನಗೆ ತುಂಬಾ ವಿಷಯಗಳು ಗೊತ್ತಾಗಿದ್ದು ಈ ಎಲ್ಲ ವಿಷಯಗಳು ನಾನು ನನ್ನ ಫೋನ್‌ನಲ್ಲಿ ಸೇವ್ ಮಾಡಿ ಇಟ್ಟಿದ್ದೇನೆ. ಚೀಟ್ ಮಾಡಿ ನಿರೀಕ್ಷಾ ಮೊದಲು ನನ್ನನ್ನು ಪ್ರೀತಿಸುವ ನಾಟಕ ಮಾಡಿ ನಂತರ ನನ್ನ ಅಶ್ಲೀಲ ಫೋಟೋಗಳನ್ನು ಮುಂದೆ ಇಟ್ಟು ತುಂಬಾನೇ ಹಣ ಪಡೆದಿದ್ದಾಳೆ. ನಾನು ಇವರಿಗೆ ಪ್ರತಿ ಸಲ ಹಣ ಕೊಟ್ಟು ಕೊಟ್ಟು ತುಂಬಾ ಕಷ್ಟಪಡುತ್ತಿದ್ದೆ. ನಂತರ ನಾನು ಹಣ ಕೊಡುವುದಿಲ್ಲ ಪೊಲೀಸ್ ಕಂಪ್ಲೇಂಟ್ ಕೊಡಲಿಕ್ಕೆ ನಿರ್ಧರಿಸಿದೆ.

ಆಗ ರಾಕೇಶ್ ಮತ್ತು ಅವನ ಗೆಳೆಯರು ತಸ್ಲಿಂ ಹಾಗೂ ಇನ್ನಿತರರು ನನ್ನನ್ನು ವಾಮಂಜೂರು ಹೋಗುವ ರಸ್ತೆಯಲ್ಲಿ ಬೈತುರ್ಲಿ ಎಂಬಲ್ಲಿ ಕರೆಸಿ ಕಪಾಳ, ಕುತ್ತಿಗೆ ಹಾಗೂ ಪ್ರೈವೇಟ್ ಪಾರ್ಟ್‌ಗೆ ಹೊಡೆದು ನಂತರ ಹಣ ನೀಡದಿದ್ದರೆ ಕೊಲ್ಲುವುದಾಗಿ ಬೆದರಿಸಿದ್ದಾರೆ. ಅದಾಗಿಯೂ ನಾನು ಕಂಪ್ಲೇಂಟ್ ಕೊಟ್ಟರೆ ಅವರ ತಂಡ ನಾನೇ ನಿರೀಕ್ಷಾಳನ್ನು ಬಲವಂತವಾಗಿ ರೇಪ್ ಮಾಡಿದ್ದು ಅಂತ ಕಂಪ್ಲೇಂಟ್ ಉಲ್ಟಾ ಮಾಡುತ್ತೇವೆ ಹೇಳಿದ್ದಾರೆ.

ರಾಹುಲ್ ನಂತರ ಕರೆದು ನಮಗೆ ಮಿಥುನ್ ರೈ ಹಾಗೂ ಇನ್ನೂ ಹಲವರ ಪರಿಚಯವಿದೆ. ನೀನು ನಮ್ಮ ರೋಮವನ್ನು ತೆಗೆಯಲು ಸಾಧ್ಯವಿಲ್ಲ ಎಂದು ಅವನು ಹೇಳಿದ್ದಾನೆ. ನಾವು ಹೇಳಿದಂತೆ ನೀನು ಕೇಳಿಕೊಂಡು ಇರಬೇಕು ಎಂದು ಆ ತಂಡ ನನಗೆ ವಾರ್ನಿಂಗ್ ಮಾಡಿದೆ. ನಂತರ ನಿರೀಕ್ಷಾ ನಾವು ಎಸ್ಸಿ-ಎಸ್ಟಿ ನಾವು ಎಂತ ಹೇಳುತ್ತೇವೋ ಅದೇ ಫೈನಲ್ ಕಾನೂನಿನಲ್ಲಿ, ಏಕೆಂದರೆ ಕಾನೂನು ಮಾಡಿದ್ದೆ ನಮ್ಮವರು ಎಂದು ನಿರೀಕ್ಷಾ ಹೇಳಿದ್ದಾಳೆ.

ನಿರೀಕ್ಷಾ ರಾಹುಲ್ ರಾಕೇಶ್ ಹಾಗೂ ಇನ್ನಿತರರನ್ನು ಸೆಕ್ಸ್‌ನ ಆಸೆ ತೋರಿಸಿ ತನ್ನ ಹಿಡಿತದಲ್ಲಿ ಇಟ್ಟು ಅವರಿಂದ ನನಗೆ ಬೆದರಿಕೆ ಹಾಕಿದ್ದಾರೆ.



ನಾನು ಪ್ರವೀಣ್ ನೆಟ್ಟಾರ್ ಅವರು ಹತ್ಯೆಯಾದ ದಿನ ಓಂ ಶಾಂತಿ ಎಂದು ಅವರ ಫೋಟೋ ವಾಟ್ಸಪ್ ಸ್ಟೇಟಸ್ ಹಾಕಿದ್ದೆ. ಆ ದಿನ ನಿರೀಕ್ಷಾ ಮತ್ತು ಅವರ ತಂಡ ಹಿಂದುಗಳು ಸಾಯಬೇಕು. ಇನ್ನು ಸಾಯುತ್ತಾರೆ. ಮಂಗಳೂರಿನಲ್ಲಿ ನೆಕ್ಸ್ಟ್ ಮರ್ಡರ್ ನನ್ನದೇ ಎಂದು ನಿರೀಕ್ಷಾ ಮತ್ತು ತಂಡ ನನಗೆ ಆವಾಜ್ ಹಾಕಿ ಸ್ಟೇಟಸ್‌ನಲ್ಲಿ ಇರೋ ಪ್ರವೀಣ್ ನೆಟ್ಟರ್ ಫೋಟೋ ತೆಗಿ ಇಲ್ಲವಾದರೆ 5,000 ಕೊಡು ಎಂದು ಬ್ಲ್ಯಾಕ್ ಮೇಲ್ ಮಾಡಿದರು. ಬೇರೆ ದಾರಿ ತೋರದೆ ನಾನು ಫೋಟೋ ಡಿಲೀಟ್ ಮಾಡಿದೆ.



ನಿರೀಕ್ಷಾ ಮತ್ತು ಅವರ ತಂಡ ಪ್ರತಿಸಲ ನನ್ನಲ್ಲಿ ಬ್ಲಾಕ್‌ಮೇಲ್ ಮಾಡಿ ಹಣ ಕೇಳುವಾಗ ನಾನು ಆನ್‌ಲೈನ್ ಪೇ ಮಾಡಿದರೆ ಅದನ್ನು ಬೇಡ ಹೀಗೆ ಕ್ಯಾಶ್ (ಲಿಕ್ವಿಡ್ ಮನಿ) ರೂಪದಲ್ಲಿ ತಂದು ಕೊಡುವಂತೆ ಕಂಡೀಶನ್ ಹಾಕಿದ್ದಾರೆ ಮತ್ತು ಆನ್‌ಲೈನ್ ಪೇಮೆಂಟ್ ಅಲ್ಲಿ ಸಾಕ್ಷಿ ಸಿಗುತ್ತೆ ಅಂತ ಹೇಳಿ ನನ್ನ ಕಪಾಳಕ್ಕೆ ಕೆಲವು ಸಲ ಹೊಡೆದಿದ್ದಾರೆ.


ನಿರೀಕ್ಷಾ ಮತ್ತು ಅವರ ತಂಡ ನನ್ನಲ್ಲಿ ಒಂದು ಎಲ್‌ಐಸಿ ಇತ್ತು. ಅದರಲ್ಲಿ ನೊಮಿನಿ ಹೆಸರು ನಿರೀಕ್ಷಾ ಅಂತ ಹಾಕು ಎಂದು ನನ್ನನ್ನು ತುಂಬಾ ಚಿತ್ರಹಿಂಸೆ ಮಾಡಿದ್ದಾರೆ. ಆದರೆ ನಾನು ನಿರೀಕ್ಷಾ ಹೆಸರು ನಾಮಿನಿ ಮಾಡಿದರೆ ಇವರು ನನ್ನನ್ನು ಆಟ ಆ ಎಲ್‌ಐಸಿ ಹಣಕ್ಕೆ ಕೊಲ್ಲುತ್ತಾರೆ ಎಂಬ ಭಯದಿಂದ ನಾನು ಅದಕ್ಕೆ ಒಪ್ಪಲಿಲ್ಲ, ಅದರ ಬದಲಾಗಿ 20 ಸಾವಿರ ಹಣವನ್ನು ಅವರಿಗೆ ನೀಡಿದ್ದೇನೆ. ನಾನು ಇದುವರೆಗೆ ಸುಮಾರು ಮೂರರಿಂದ ನಾಲ್ಕು ಲಕ್ಷ ಹಣವನ್ನು ನಿರೀಕ್ಷೆ ಮತ್ತು ಅವಳ ತಂಡಕ್ಕೆ ನೀಡಿದ್ದೇನೆ. ಮತ್ತು ಪ್ರತಿಸಲ ನಾನು ಇವರೆಲ್ಲ ಹಣ ಕೊಡುವಾಗ ಇನ್ನೂ ನನ್ನಲ್ಲಿ ಸಾಧ್ಯವಿಲ್ಲ ನನ್ನನ್ನು ಬಿಟ್ಟುಬಿಡಿ ಎಂದು ಬೇಡಿದ್ದೇನೆ. ಬಟ್ ನಿರೀಕ್ಷಾ ಮತ್ತು ತಂಡ ಎಷ್ಟು ಹಣ ಕೊಟ್ಟರೂ ನನ್ನನ್ನು ಹಿಂಸಿಸುತ್ತಿದ್ದರು. 20 ಲಕ್ಷ ಕೊಟ್ಟರೆ ಕಂಪ್ಲೀಟ್ ನನ್ನನ್ನು ನನ್ನ ಪಾಡಿಗೆ ಬಿಡುತ್ತೇವೆ ಎಂದು ಹೇಳಿದರು. ನನ್ನನ್ನು ಕೊಲೆ ಮಾಡಲು ತುಂಬಾ ಸಲ ನನ್ನ ಹಣದಲ್ಲಿಯೇ ಜನ ಸೆಟ್ ಮಾಡಿದ್ದರು. ಮತ್ತು ಬೆದರಿಸುತ್ತಿದ್ದರು.

ನನಗೆ ಗೊತ್ತು ಇವರು ನನ್ನನ್ನು ಸಾಯುವವರೆಗೂ ಬಿಡುವುದಿಲ್ಲ ಇದೇ ರೀತಿ ಹಣಕ್ಕಾಗಿ ಹಿಂಸಿಸುತ್ತಾರೆ ಇದರಿಂದ ನಾನು ಹಲವು ಸಲ ಆತ್ಮಹತ್ಯೆ ಮಾಡಲು ಯತ್ನಿಸಿದ್ದೇನೆ. ಬಟ್ ನನಗೆ ಬದುಕಲು ತುಂಬಾ ಆಸೆ ಇದೆ. ಇವರ ಹಣದ ಆಸೆಗೆ ನಾನು ತುಂಬಾ ಸಾಲ ಮಾಡಿ ಹಣ ಕೊಟ್ಟಿದ್ದೇನೆ. ಕೊನೆಗೆ ಬೈಕ್ ಮಾರಿ ಹಣ ತಂದು ಕೊಡು ಎಂದು ಇವರು ಹೇಳಿದ್ದಾರೆ.

ಇವರಿಗೆ ಕಾನೂನಿನ ರೀತಿಯಲ್ಲಿ ಯಾವುದೇ ಶಿಕ್ಷೆ ಆಗುವುದಿಲ್ಲ ಅದು ನನಗೆ ಗೊತ್ತು. ಏಕೆಂದರೆ ನಮ್ಮ ಕಾನೂನು ವ್ಯವಸ್ಥೆ ಆ ರೀತಿ ಇದೆ. ನಾನು ಇವರ ಬಗ್ಗೆ ಇರುವ ಎಲ್ಲಾ ದೂರುಗಳನ್ನು ಮತ್ತು ಅವರು ಮಾಡಿರುವ ಕೆಲವು ಕ್ರಿಮಿನಲ್ ಕೆಲಸಗಳನ್ನು ಫೋನಲ್ಲಿ ಸೇವ್ ಮಾಡಿಟ್ಟಿದ್ದೇನೆ.

ನಾನು ನಿರೀಕ್ಷಾ ಫೋನ್‌ನಲ್ಲಿ ವಾಟ್ಸಪ್‌ವೆಬ್ ಕನೆಕ್ಟ್ ಮಾಡಿದಾಗ ನಿರೀಕ್ಷಾ ಮತ್ತು ರಾಕೇಶ್ ಸೆಕ್ಸ್ ಮಾಡಿದ ವಿಡಿಯೋ ಅಂಜಲಿಯ ಡ್ರೆಸ್ ಚೇಂಜಿಂಗ್ ವೀಡಿಯೋ ಎಲ್ಲಾ ಸಿಕ್ಕಿದೆ.

ಕಾನೂನಿನ ರೀತಿಯಲ್ಲಿ ನನಗೆ ಇವರಿಗೆ ಶಿಕ್ಷೆ ನೀಡಲು ಸಾಧ್ಯವಿಲ್ಲ. ಏಕೆಂದರೆ ಅವರಿಗೆ ಅಷ್ಟು ದೊಡ್ಡ ಹುದ್ದೆಯಲ್ಲಿರುವ ಜನರ ಪರಿಚಯವಿದೆ ಮತ್ತು ಇದರಲ್ಲಿ ನನ್ನದು ತಪ್ಪಿದೆ. ಆದ್ದರಿಂದ ಇವರಿಗೆ ನಾನೇ ಶಿಕ್ಷೆ ಕೊಡುತ್ತೇನೆ ಇವರ ಎಲ್ಲಾ ವಿಡಿಯೋಗಳನ್ನು ನಾನು ಸೋಶಿಯಲ್ ಮೀಡಿಯಾದಲ್ಲಿ ಹಾಕುತ್ತೇನೆ ಆಗಲಾದರೂ ನನ್ನ ಸಾವಿಗೆ




☞10

5 ☞

ಕಳ್ಳಾಟ ಬಯಲಾಗಿತ್ತು! ಆತನ ಬ್ರೈನ್ ಸುಸ್ಥಿತಿಯಲ್ಲಿದೆ, ಕಂಪ್ಲೀಟ್ ನಾರ್ಮಲ್ ಎಂದು ವೈದ್ಯರ ವರದಿ ಬಂದಿತ್ತು!

ಯಾವಾಗ ತನ್ನ ಕಳ್ಳಾಟ ಬಯಲಾಯಿತೋ, ಉಮೇಶ್ ರೆಡ್ಡಿ ಕ್ಷಮಾದಾನಕ್ಕೆ ಅರ್ಜಿ ಸಲ್ಲಿಸಿ ಪ್ರಾಣ ಭಿಕ್ಷೆ ಬೇಡಿದ್ದರಿಂದ ಮಾನ್ಯ ಸುಪ್ರೀಂ ಕೋರ್ಟ್ 2022ರಲ್ಲಿ ಅವನ ಮರಣದಂಡನೆಯನ್ನು 30 ವರ್ಷಗಳ ಶಿಕ್ಷೆಗೆ ಇಳಿಸಿತ್ತು! ಈಗ ಸಂಪೂರ್ಣ ಶಿಕ್ಷೆ ಮುಗಿಸಿ ಬಿಡುಗಡೆಯ ಕೊನೆ ಹಂತ ತಲುಪಿ ಸದ್ಯ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾನೆ. ಅವನನ್ನು ಎಲ್ಲಾ ಸಜಾ ಬಂದಿಗಳ ಜೊತೆಗೆ ಸಜಾ ಬ್ಯಾರಕ್ ನಲ್ಲೆ ಇಟ್ಟಿದ್ದರೂ ಸಪ ರೇಟ್ ವಿಶೇಷ ಸೌಲಭ್ಯಗಳನ್ನು ಪಡೆದು ಆರಾಮವಾಗಿ ಇದ್ದಾನಂತೆ! ರೆಡ್ಡಿ ಎರಡು ಆಂಡ್ರಾಯ್ಡ್ ಮೊಬೈಲ್ ಫೋನ್, ಎರಡು ಕೀ ಪ್ಯಾಡ್ ಮೊಬೈಲ್ ಪೋನ್ ಗಳನ್ನಿಟ್ಟು ಕೊಂಡು ಮಾತನಾಡುತ್ತಿರುವುದನ್ನು ರೆಕಾರ್ಡಿಂಗ್ ಮಾಡಿಟ್ಟುಕೊಂಡಿರುವ ಮತ್ತೊಬ್ಬ ಸಜಾ ಬಂದಿ ಪವನ ಎಂಬಾತ ಆ ವೀಡಿಯೊವನ್ನು ಇಟ್ಟುಕೊಂಡು ಜೈಲ್ ಮುಖ್ಯ ಅಧೀಕ್ಷಕ ಸುರೇಶ್ ರನ್ನು ಬ್ಲಾಕ್ ಮೇಲ್ ಮಾಡಿ 'ನನಗೂ ವಿವಿಧ ಸೌಲಭ್ಯ ಕೊಡಿ, ಒಂದು ಮೊಬೈಲ್ ಕೊಡಿ' ಎಂದು ಹೆದರಿಸುತ್ತಿದ್ದಾನಂತೆ! ಆ ವೀಡಿಯೋಸ್ ಗಳನ್ನು ಆತ ಜೈಲಿನ ಹೊರಗೆ ಕಳುಸಿದ್ದು, ದರ್ಶನ್ ಲಾಯರ್ ಬಳಿಯೂ ಇಂತಹ ಹಲವು ಜೈಲೊಳಗಿನ ವೀಡಿಯೋಗಳ ಪೆನ್‌ಡ್ರೈವ್ ಸ್ಟಾಕ್ ಇವೆಯಂತೆ!

ನಿಮಗೇ ನೆನಪಿರಬೇಕು, ಟಿವಿಯೊಂದರ ಜೊತೆಗೆ ಲೈವ್‌ಶೋನಲ್ಲಿ ಮಾತನಾಡುತ್ತಿದ್ದ ದರ್ಶನ್ ಪರ ವಕೀಲರು ನಮ್ಮ ಕಕ್ಷಿದಾರ 'ನಟ ದರ್ಶನ್'ಗೆ ಹಾಸಿಗೆ ದಿಂಬು ಕೊಡಲು ಪರಪ್ಪನ ಅಗ್ರಹಾರದ ಜೈಲಿನ ಮುಖ್ಯ ಅಧೀಕ್ಷಕರು ಕೋರ್ಟ್ ಆರ್ಡರ್ ಕೇಳುತ್ತಾರೆ! ಗುಬ್ಬಚ್ಚಿ ಸೀನನಂತ ಕುಖ್ಯಾತ ರೌಡಿ ಶೀಟರ್‌ಗಳಿಗೆ ಜೈಲೊಳಗೇ ಬರ್ತ್‌ಡೇ ಆಚರಿಸಲು ಆಪಲ್ ಹಾರಗಳು, ಟೇಬಲ್ ಉದ್ದ ಕೇಕ್, 200 ಕೆಜಿ ಮಟನ್ ಬಿರಿ ಯಾನಿಗೆ ಲಕ್ಷಾಂತರ ರೂಪಾಯಿ ಪಡೆದು ಅವಕಾಶ ಒದಗಿಸುತ್ತಾರೆ. ಇದ್ಯಾವ ನ್ಯಾಯ...? ನಮ್ಮ ಬಳಿ ಇನ್ನೂ ಅನೇಕ ಸ್ಟಿಂಗ್ ಮಾಡಿ ರುವ ಪರಪ್ಪನ ಅಗ್ರಹಾರದ ಜೈಲೊಳಗಿನ ಬ್ಯಾರಕ್ ವೀಡಿ ಯೋಸ್, ಕಾನೂನು ಬಾಹಿರ ಅಕ್ರಮ ಚಟುವಟಿಕೆ ನಡೆಸು ತ್ತಿರುವ ವೀಡಿಯೋಸ್, ಗಾಂಜಾ, ಡ್ರಗ್ಸ್ ಮಾರುವ, ಮೊಬೈಲ್ ಸಪ್ಲೈ ಮಾಡುವ ವೀಡಿಯೋಸ್ ಇವೆ ಅವುಗಳನ್ನು, ಪೊಲೀಸ್ ಕಮೀಷನರ್‌ಗೇ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ, ಬಂದೀಖಾನೆ ಡಿಜಿಗೆ, ಗೃಹ ಇಲಾಖೆಗೆ ಮತ್ತು ಕೋರ್ಟ್‌ಗೆ ತಲುಪಿಸುತ್ತೇನೆ! ಬೆಂಗಳೂರು ಜೈಲಿನ ಚೀಫ್ ಸೂಪರಿಂಡೆಂಟ್, ಅಸಿಸ್ಟೆಂಟ್ ಸೂಪರಿಂಡೆಂಟ್ ಗಳ ಭ್ರಷ್ಟಾಚಾರ ಬಯಲಿಗೆಳದುಎಲ್ಲರ ಬಣ್ಣ ಬಯಲು ಮಾಡುತ್ತೇವೆ!' ಎಂದು ಹೇಳಿರುವುದು ಇದೀಗ ಭಾರಿ ಚರ್ಚೆ ಆಗುತ್ತಿದೆ! 'ನನಗೂ ಆ ವಿಡಿಯೋ ತೆಗೆದ ಖೈದಿಗೂ, ದರ್ಶನ್ ಲಾಯರ್ ಜೊತೆಗೂ ರಾಜೀ ಮಾಡಿಸಿ! ಆ ವೀಡಿಯೋಸ್, ಪೆನ್ ಡ್ರೈವ್ ವಾಪಸ್ ಕೊಡ್ಸೀ! ಡಿಲೀಟ್ ಮಾಡ್ಸೀ!' ಎಂದು ಕುಖ್ಯಾತ ರೌಡಿ ಯೊಬ್ಬನ ಬಳಿ ಚೀಫ್ ಸೂಪರಿಂಡೆಂಟ್ ಸುರೇಶ್ ಅಂಗಲಾಚಿ ಬೇಡುತ್ತಿದ್ದಾರಂತೆ! ಈಗ ಎಲ್ಲಾ ಕಡೆಯಿಂದಲೂ ಅವರಿಗೆ ಬ್ಲಾಕ್ ಮೇಲ್ ನಡೆಯುತ್ತಿದೆಯಂತೆ! ಇಷ್ಟರಲ್ಲೇ ಉಮೇಶ್ ರೆಡ್ಡಿ ಮೊಬೈಲ್ ಹಿಡಿದು ಮಾತನಾಡುವ ವಿಡಿಯೋ ಕೂಡ ಹೊರಬರು ತ್ತಂತೆ!!



ಒಟ್ಟಾರೆ, ಭ್ರಷ್ಟಾಚಾರದ ಕೊಂಪೆಯಾಗಿರುವ ಪರಪ್ಪನ ಅಗ್ರಹಾರವೆಂಬ ಭೂಗತ ಹುತ್ತ ದೊಳಗಿಂದ ಇನ್ನೂ ಎಂತೆಂತ ಪೆನ್ ಡ್ರೈವ್, ವಿಡಿಯೋಸ್ ಹೊರಬರುತ್ತೋ ಗೊತ್ತಿಲ್ಲ... ಒಂದು ಸಂತಸದ ಸಂಗತಿ ಅಂದ್ರೆ, ದಕ್ಷ ಪೊಲೀಸ್ ಆಫೀಸರ್ ಬಿ. ದಯಾನಂದ ಅವರು ಇದೀಗ ಕಾರಾ ಗೃಹ ಇಲಾಖೆ ಮುಖ್ಯಸ್ಥರಾಗಿ ಆನ್ ಡ್ಯೂಟಿಲಿದ್ದಾರೆ. ರಾಜ್ಯದ ಎಲ್ಲಾ ಜೈಲುಗಳನ್ನು ದೇವರ ಮನೆ ಮಾಡುತ್ತಾರೆ ಎಂಬ ನಂಬಿಕೆ ಸಾರ್ವಜನಿಕ ವಲಯ ದಲ್ಲಿದೆ...

ಅಂದಹಾಗೆ, ಜೈಲು ಪೊಲೀಸರು ಹಾಗೂ ರೌಡಿಗಳು ತಮ್ಮ ತಮ್ಮ ಲಾಭಕ್ಕಾಗಿ ಮಾಡಿಕೊಳ್ಳುವ ಇಂತಹ ಸ್ಟಿಂಗ್ ಆಪರೇಷನ್ ವೀಡಿಯೊಗಳು, ಪೆನ್ ಡ್ರೈವ್ ಹಗರಣಗಳು ಪರಪ್ಪನ ಅಗ್ರಹಾರ ಜೈಲಿಗೇನೂ ಹೊಸತಲ್ಲ. ಈ ಹಿಂದೆಯೂ ರಂಗನಾಥ್ ಅವರು ಚೀಫ್ ಸೂಪರಿಂಡೆಂಟ್ ಆಗಿದ್ದಾಗಲೂ ಆತ ಲಂಚ ಪಡೆಯುವ ಜೈಲ್ ಆಫೀಸಿನಲ್ಲೇ ಬಿಯರ್ ಕುಡಿಯುವ ವಿಡಿಯೋ ಮಾಡಿಸಿ ಇಟ್ಟುಕೊಂಡಿದ್ದ ಕುಖ್ಯಾತ ಟೆರರಿಸ್ಟ್ ನಾಸಿರ್ ಅಲ್ಲಿನ ಅಧಿಕಾರಿಗಳಿಗೆ ಅದೇ ಸ್ಟಿಂಗ್ ಕ್ಯಾಮೆರಾದ ವಿಡಿಯೋ ತೋರಿಸಿ ಹೆದರಿಸಿ ಬ್ಲಾಕ್ ಮೇಲ್ ಮಾಡಿಟ್ಟುಕೊಂಡು ಧನದ ಮಾಂಸ ಒಳಗೆ ತರಿಸಿಕೊಂಡು ಬಿರಿಯಾನಿ ಮಾಡಿಸಿ ಮಾರುತ್ತಿದ್ದನಂತೆ! ಮೊಬೈಲ್ ಪೋನ್ ಗಳನ್ನು ಮಾರುತ್ತಿದ್ದನಂತೆ!! ತಾನು ಹೇಳಿದವರಿಗೆ ವಿಐಪಿ ಬ್ಯಾರಕ್ ಇಂತಿಷ್ಟು ಬಾಡಿಗೆಗೆ ಕೊಡಬೇಕೆಂದು ಕರಾರು ವಿಧಿಸುತ್ತಿದ್ದ ನಂತೆ!!!

ಇನ್ನೂ ಕೆಲ ಕುಖ್ಯಾತ ರೌಡಿಗಳು, ಜೈಲು ಅಧಿಕಾರಿಗಳು ಡಾನ್ ಒಬ್ಬನ ಸೆಲ್ ಬಳಿಗೆ ಬಂದು, ಸೆಲ್ಯೂಟ್ ಹೊಡೆದು ನೋಟಿನ ಕಂತೆಕಂತೆ ಎಣಿಸಿ ತೆಗೆದುಕೊಂಡು ವೀಡಿಯೊದಲ್ಲಿ ಸೆರೆಯಾಗಿದ್ದರು!ಅದು ಯಾವಾಗಲೋ ಶೂಟಿಂಗ್ ಆಗಿದ್ದು ಇನ್ನಾವಾಗಲೋ ರಿಲೀಸ್ ಆಗಿ ಪೊಲೀಸ್ ಇಲಾಖೆಯಲ್ಲಿ ಫಜೀತಿ ಸೃಷ್ಟಿಸಿತ್ತು! ಎಷ್ಟೋ ಕುಖ್ಯಾತ ಕ್ರಿಮಿನಲ್ ಗಳು ಈ ಬಂದೀಖಾನೆಯ ಅಧಿಕಾರಿಗಳ ವೀಕ್ ನೆಸ್ ತಿಳಿದು ಕೊಂಡು ಅವರಿಗೆ ಬೇಕಾದ್ದನ್ನು ಕೊಟ್ಟು ಅದನ್ನೇ ವೀಡಿಯೊ ಮಾಡಿ ಬ್ಲಾಕ್‌ಮೇಲ್ ಮಾಡಿರುವುದು ಬೆಳಕಿಗೇ ಬರೋದಿಲ್ಲ. ಈ ಹಿಂದೆ ಇದೇ ಜೈಲಿನ ಮುಖ್ಯ ಅಧೀಕ್ಷಕರೊಬ್ಬರ ನೇಕೆಡ್ ವೀಡಿಯೋ ಮಾಡಿ ಹನಿಟ್ರಾಪ್ ಮಾಡಿಟ್ಟುಕೊಂಡು ಹೆದರಿಸಿದ್ದಕ್ಕೆ ಅವರು ಜೈಲಿನ ಕ್ವಾಟ್ರಸ್‌ನಲ್ಲೇ ನೇಣುಬಿಗಿದುಕೊಂಡು ಸತ್ತು ಹೋದದ್ದು ಇತಿಹಾಸ....!!

# ನಾನು ಹೀಗೇ ಸಾಯಬೇಕಾ..... ಜೈಲಿನಲ್ಲಿ ದರ್ಶನ್ ಕೂಗಾಟ!

5 ☞

ಪರಿಶೀಲಿಸಿದಾಗ ಮಧ್ಯಭಾಗದಲ್ಲಿ ಕತ್ತರಿಸಿ ಪುನಃ ಅಂಟಿಸಿರುವುದು ಕಂಡು ಬಂದಿತ್ತು. ಹೀಗಾಗಿ, ಎರಡೂ ಚಪ್ಪಲಿ ಕತ್ತರಿಸಿದಾಗ ಪ್ರತ್ಯೇಕವಾಗಿ 46 ಗ್ರಾಂ ಎಂಡಿಎಂಎ ಕ್ರಿಸ್ಟೆಲ್ ಪತ್ತೆಯಾಗಿತ್ತು. ಜಪ್ತಿಯಾದ ಡ್ರಗ್ಸ್ ಹಾಗೂ ಆರೋಪಿ ಶಬ್ಬೀರ್‌ನನ್ನು ವಶಕ್ಕೆ ಒಪ್ಪಿಸಿದ ಜೈಲು ಉಪ ಅಧೀಕ್ಷಕ ಕರ್ಣ ಬಿ ಕ್ಷತ್ರಿಯ ದೂರು ನೀಡಿದ್ದರು. ಡ್ರಗ್ಸ್ ಪೂರೈಕೆಗೆ ಬಂದಿದ್ದ ಶಬ್ಬೀರ್ ಹಾಗೂ ತರಿಸಿಕೊಳ್ಳಲು ಯತ್ನಿಸಿದ್ದ ಕೈದಿ ಸೈಯದ್ ಸುಹೈಲ್ ವಿರುದ್ಧ ಎನ್‌ಡಿಪಿಎಸ್ ಕಾಯಿದೆ, ಜೈಲು ನಿಯಮ ಉಲ್ಲಂಘನೆ ಕಾಯಿದೆ ಅನ್ವಯ ಪ್ರಕರಣ ದಾಖಲಿಸಲಾಗಿದೆ.

“ಸ್ನೇಹಿತನೊಬ್ಬ ಸುಹೈಲ್‌ಗೆ ತಲುಪಿಸುವಂತೆ ಚಪ್ಪಲಿಯಿದ್ದ ಬ್ಯಾಗ್ ಕೊಟ್ಟಿದ್ದ. ಅದನ್ನು ತಂದು ಕೊಟ್ಟಿದ್ದೇನೆ. ಡ್ರಗ್ಸ್ ಬಚ್ಚಿಟ್ಟಿರುವುದರ ಬಗ್ಗೆ ಗೊತ್ತಿಲ್ಲ' ಎಂದು ಆರೋಪಿ ಶಬ್ಬೀರ್ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಯೊಬ್ಬರು ತಿಳಿಸಿದ್ದಾರೆ.

ಜಪ್ತಿ ಮಾಡಿರುವ 46 ಗ್ರಾಂ ಎಂಡಿಎಂಎ ಮೌಲ್ಯ 2.30 ಲಕ್ಷ ರೂ. ಎಂದು ಅಂದಾಜಿಸಲಾಗಿದೆ. ಇಷ್ಟೊಂದು ಪ್ರಮಾಣದ ಸಿಂಥೆಟಿಕ್ ಡ್ರಗ್ಸ್ ಜೈಲಲ್ಲಿ ಮಾರಾಟ ಮಾಡುವ ಉದ್ದೇಶದಿಂದ ತರಿಸಿಕೊಂಡಿ ರುವ ಶಂಕೆಯಿದೆ. ಡ್ರಗ್ಸ್ ತರಿಸಿದ್ದ ಕೈದಿ ಸುಹೈಲ್‌ನನ್ನು ನ್ಯಾಯಾಲಯದ ಅನುಮತಿ ಪಡೆದು ಬಾಡಿ ವಾರೆಂಟ್ ಮೂಲಕ ವಶಕ್ಕೆ ಪಡೆದು ವಿಚಾರಣೆ ನಡೆಸಬೇಕಿದೆ. ಸುಹೈಲ್ ವಿಚಾರಣೆ ನಂತರ ಡ್ರಗ್ಸ್ ತರಿಸಿಕೊಂಡಿದ್ದ ಉದ್ದೇಶದ ಬಗ್ಗೆ ಖಚಿತತೆ ಸಿಗಲಿದೆ....

7 ☞

ಒಂದು ಬೆಲೆ ಸಿಕ್ಕಂತೆ ಆಗುತ್ತದೆ. ಬಟ್ ನಿರೀಕ್ಷಾ ಮತ್ತು ಅವಳ ತಂಡ ಇದೇ ರೀತಿ ಇನ್ನೊಂದು ಹುಡುಗನ ಹುಡುಕಿ ಅವನನ್ನು ಹಣಕ್ಕಾಗಿ ಉಪಯೋಗಿಸುತ್ತಾರೆ. ಸೊ ಇವರ ಈ ದಂಧೆ ನನ್ನಿಂದಲೇ ಕೊನೆ ಆಗಬೇಕು ಇನ್ನು ಯಾವುದೇ ಹುಡುಗರು ಬಲಿಪಶು ಆಗಬಾರದು. ಅದಕ್ಕಾಗಿ ಇವರ ಎಲ್ಲಾ ಕೆಟ್ಟ ಕೆಲಸಗಳು ಎಲ್ಲರಿಗೂ ಗೊತ್ತಾಗಬೇಕು. ನಾನು ಸ್ಲೀಪಿಂಗ್ ಟ್ಯಾಬ್ಲೆಟ್ ತೆಗೆದುಕೊಂಡು ಆತ್ಮಹತ್ಯೆ ಮಾಡಬೇಕೆಂದು ಎನಿಸಿದೆ ಏಕೆಂದರೆ ಅದು ಯಾವುದೇ ಪೈನ್ ಆಗುವುದಿಲ್ಲ ಬಟ್ ಅದರಿಂದ ನನ್ನ ಅಂಗಾಂಗಗಳು ಮತ್ತು ದೇಹದ ಬೇರೆ ಭಾಗಗಳಿಗೆ ಎಫೆಕ್ಟ್ ಆಗುತ್ತದೆ ಆದ್ದರಿಂದ ನಾನು ನೋವಾದರೂ ಪರವಾಗಿಲ್ಲ ನೇಣುಹಾಕಿ ಸಾಯುತ್ತೇನೆ. ನನ್ನ ಅಂಗಾಂಗಗಳನ್ನು ದಾನ ಮಾಡಿ.

ನೋಟ್ : ನನ್ನ ದೇಹದ ಯಾವುದೆಲ್ಲ ಉಪಯೋಗ ಇರುವ ಅಂಗಾಂಗವಿದೆ ಅದನ್ನು ದಾನ ಮಾಡಲು ನಾನು ನನ್ನ ಸ್ವ ಇಚ್ಛೆಯಿಂದ ಒಪ್ಪಿಕೊಳ್ಳುತ್ತಿದ್ದೇನೆ.

ನಿರೀಕ್ಷಾ ಮತ್ತು ಅವನ ತಂಡ ನನ್ನ ತಮ್ಮ(ಅಭಿಜಿತ್) ನನ್ನು ಕೂಡ ಕೊಲೆ ಮಾಡಲು ಟಾರ್ಗೆಟ್ ಮಾಡಿ ನನ್ನನ್ನು ಹೆದರಿಸುತ್ತಿದ್ದ ಸೋ ಅವನನ್ನು ಕೇರ್‌ಫುಲ್ಲಾಗಿ ನೋಡಿಕೊಳ್ಳಿ ನಿರೀಕ್ಷಾ ಮತ್ತು ಅವಳ ತಂಡ ನನ್ನ ಅಶ್ಲೀಲ ಫೋಟೋವನ್ನು ಅವರುಗಳು ಒಂದು ವಾಟ್ಸಪ್ ಗ್ರೂಪ್ ಮಾಡಿ ಅದರಲ್ಲಿ ನನ್ನನ್ನು ಆಡ್ ಮಾಡಿ ಮಕ್ಕರ್ ಮಾಡುತ್ತಿದ್ದರು. ನನಗೆ ಬದುಕಲು ತುಂಬಾ ಆಸೆ ಇದೆ. ಮತ್ತು ನಾನು ನನ್ನ ಫ್ಯಾಮಿಲಿಯನ್ನು ತುಂಬಾ ಮಿಸ್ ಮಾಡುತ್ತೇನೆ. ಎಲ್ಲರನ್ನು ತುಂಬಾ ಮಿಸ್ ಮಾಡುತ್ತೇನೆ. ಸ್ಪೆಷಲ್ಲಾಗಿ ಸುಕೇಶ್, ಅಭಿಜಿತ್, ರೂಮ್‌ಮೇಟ್ ಟಿಬಿಎಸ್, ಚಿಕ್ಕಪ್ಪ ಮಾಮ, ಎಲ್ಲರನ್ನು ಮಿಸ್ ಮಾಡುತ್ತೇನೆ. ಮತ್ತು ನೇತ್ರ ಅಂತ ಒಂದು ಹುಡುಗಿ ಇದ್ದಾಳೆ ಅವಳಲ್ಲಿ ನಾನು ಇವರು ಈ ರೀತಿ ನನ್ನನ್ನು ಹಿಂಸಿಸುತ್ತಿದ್ದರು ಎಂದು ಹೇಳಿದ್ದೇನೆ ಮತ್ತು ಅವಳು ತುಂಬಾನೇ ನನಗೆ ಏನು ಆಗುವುದಿಲ್ಲ ಎಲ್ಲ ಸರಿಯಾಗುತ್ತೆ ದೇವಸ್ಥಾನಕ್ಕೆಲ್ಲ ಹೋಗು ಅದು ಇದು ಅಂತ ತುಂಬಾ ಮೋಟಿವೇಟ್ ಮಾಡಿದ್ದಳು. ಪೊಲೀಸ್ ಕಂಪ್ಲೇಂಟ್ ಕೊಡುವ ಅಂತಾನೂ ಹೇಳಿದಳು. ಬಟ್ ನನಗೆ ಈ ಕಾನೂನಿನಲ್ಲಿ ನಂಬಿಕೆ ಇಲ್ಲ, ಅವರಿಗೆ ಯಾವುದೇ ರೀತಿ ಶಿಕ್ಷೆ ಆಗುವುದಿಲ್ಲ ಸೋ ನನಗೆ ಬೇರೆ ಆಪ್ಷನ್ ಯಾವುದು ಇಲ್ಲ, ಜೀವಂತವಾಗಿ ಇದ್ದು ದಿನ ದಿನ ಸಾಯುವುದಕ್ಕಿಂತ ಒಮ್ಮೆಲೆ ಸಾಯುವುದು ಒಳ್ಳೆಯದು ಅನಿಸುತ್ತದೆ. ಸಾರೀ.....

ಇತೀ ಅಭಿಷೇಕ್

ಈ ರೀತಿಯಾಗಿ ಮರಣಪೂರ್ವ ಪತ್ರ ಬರೆದು ಪಡುಬಿದ್ರಿ, ಕಾರ್ಕಳ ಮುಖ್ಯ ರಸ್ತೆಯ ಬೆಳ್ಮಣ್‌ನ ವಸತಿ ಗೃಹವೊಂದರಲ್ಲಿ ಆತ್ಮಹತ್ಯೆ ಮಾಡಿಕೊಂಡ ಯುವಕ ಅಭಿಷೇಕ್ ಆಚಾರ್ಯ. ನಿಟ್ಟೆ ಜಂಕ್ಷನ್‌ನಿಂದ ಎರಡೂವರೆ ಕಿ.ಮೀ. ದೂರದ ಪರಪಾಡಿಯ ಸುರೇಶ್ ಆಚಾರ್ ಎಂಬವರ ಮಗ. ಅತ್ಯಂತ ಬಡ ಕುಟುಂಬ. ಐಟಿಐ ಮುಗಿಸಿ ಖಾಸಗಿ ಸಂಸ್ಥೆಯೊಂದರಲ್ಲಿ ಎಲೆಕ್ಟ್ರಿಷಿಯನ್ ಆಗಿ ಕೆಲಸ ಮಾಡುತ್ತಿದ್ದ. ಆ ಖಾಸಗಿ ಸಂಸ್ಥೆಯು ಮಂಗಳೂರಿನ ಲೇಡಿಗೋಷನ್ ಆಸ್ಪತ್ರೆಯೂ ಸೇರಿದಂತೆ ಕೆಲವು ಸಂಸ್ಥೆಗಳಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿತ್ತು. ಇಂತಹ ಸಂದರ್ಭದಲ್ಲಿ ಆತನಿಗೆ ಪರಿಚಯ ಆದವಳೇ ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕಳಸ ವಾಸಿಯಾಗಿದ್ದ ನಿರೀಕ್ಷಾ ಎಂಬ ಹೆಣ್ಮಗಳು. ಆಕೆ ತನ್ನ ಸ್ನೇಹಿತೆ ಅಂಜಲಿ ಮತ್ತಿತರರೊಂದಿಗೆ ಕಂಕನಾಡಿಯ ಕುದ್ರೋಳಿಗುಡ್ಡೆ ಎಂಬಲ್ಲಿ ಬಾಡಿಗೆ ಕೊಠಡಿಯಲ್ಲಿ ವಾಸಿಸುತ್ತಿದ್ದಳು. ಅಭಿಷೇಕ್, ತೇಜು ಕುಮಾರ್ ಮತ್ತಿತರರು ಬಿಕರ್ಣಕಟ್ಟೆ ಬಜ್ಜೋಡಿಯ ಕೊಠಡಿಯಲ್ಲಿ ವಾಸಿಸುತ್ತಿದ್ದರು. ಆ ಕೊಠಡಿಗೆ ನಿರೀಕ್ಷಾ ಹೋಗುತ್ತಿದ್ದಳು. ಅವರ ಮಧ್ಯೆ ಒಳ್ಳೆಯ ಸಂಬಂಧ ಇತ್ತು. ಇಂತಹ ಸಂದರ್ಭದಲ್ಲಿ ನಿರೀಕ್ಷಾಳಿಗಾಗಿ ಅಭಿಷೇಕ್ ಸಾಕಷ್ಟು ದುಡ್ಡು ಖರ್ಚು ಮಾಡಿದ್ದ. ಅವನ ಪ್ರಕಾರ ನಿರೀಕ್ಷಾ ಮತ್ತು ಇತರ ಮೂವರು ಆತನ ನಗ್ನ ಚಿತ್ರಗಳನ್ನು ತೆಗೆದು ಬ್ಲ್ಯಾಕ್ ಮೇಲ್ ಮಾಡುತ್ತಿದ್ದರು. ಇದರಿಂದ ಜರ್ಜರಿತನಾದ ಅಭಿಷೇಕ್ ಬೆಳ್ಮಣ್‌ನ ವಸತಿಗೃಹದ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿ ದ್ದಾನೆ. ಈ ಬಗ್ಗೆ ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ಕೇಸು ದಾಖಲಾಗಿದ್ದು ಎಸ್‌ಐ ಪ್ರಸನ್ನ ತನಿಖೆ ನಡೆಸುತ್ತಿದ್ದಾರೆ.



ಅಭಿಷೇಕ್ ಫ್ಯಾಮಿಲಿ

ಅಭಿಷೇಕ್ ಬರೆದಿದ್ದ ಮರಣಪೂರ್ವ ಪತ್ರದ ಆಧಾರದಲ್ಲಿ ಎಸ್‌ಐ ಪ್ರಸನ್ನ ಅವರು ಪತ್ರದಲ್ಲಿ ನಮೂದಿಸಿದ ನಿರೀಕ್ಷಾ, ರಾಕೇಶ್, ರಾಹುಲ್ ಅವರನ್ನು ಘಟನೆ ನಡೆದ ದಿನದಂದೇ ಠಾಣೆಗೆ ಕರೆಸಿ ವಿಚಾರಿಸಿದ್ದರು. ಅವರ ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಅಭಿಷೇಕ್ ಆರೋಪಿಸಿ ರುವಂತೆ ಆ ಮೊಬೈಲ್ ಫೋನ್ ಗಳಲ್ಲಿ ಇರಬಹುದಾದಂತಹ ವಾಟ್ಸಾಪ್ ಚಾಟ್ ಗಳು, ವೀಡಿಯೋಗಳನ್ನು ರಿಟ್ರೀವ್ ಮಾಡಲು ಎಫ್‌ಎಸ್ಎಲ್‌ಗೆ ಕಳುಹಿಸಲಾಗಿದೆ. ಅದರ ವರದಿಗಾಗಿ ಕಾಯಲಾಗುತ್ತಿದೆ. ತನಿಖೆಯು ಮುಂದುವರಿದಿದ್ದು ಹತ್ತು ಹಲವು ವಿಚಾರಗಳು ಬಯಲಿಗೆ ಬರಬೇಕಿದೆ. ಈ ಮಧ್ಯೆ ನಿರೀಕ್ಷಾಳ ರೂಮೇಟ್ ಅಂಜಲಿ ಎಂಬಾಕೆ ಕದ್ರಿ ಠಾಣೆಗೆ ದೂರು ನೀಡಿದ್ದಾಳೆ ಎನ್ನುವ ಮಾಹಿತಿಗಳಿವೆ. ಅಭಿಷೇಕ್ ಆತ್ಮಹತ್ಯೆಗೆ ಕಾರಣ ರಾದವರ ಮೇಲೆ ಸೂಕ್ತ ಕಾನೂನು ಕ್ರಮಕ್ಕಾಗಿ ಸ್ಟ್ಯಾಂಡ್‌ವಿದ್ ಅಭಿಷೇಕ್ ಎನ್ನುವ ಹ್ಯಾಶ್‌ಟ್ಯಾಗ್ ಸೋಶಿಯಲ್ ಮೀಡಿಯಾದಲ್ಲಿ ಟ್ರೆಂಡ್ ಆಗುತ್ತಿದೆ. ಅಭಿಷೇಕ್‌ನ ಸಮುದಾಯದ ಯುವಕರು ನ್ಯಾಯಕ್ಕಾಗಿ ಆಗ್ರಹಿಸಿ ಪ್ರತಿಭಟನೆಯ ಎಚ್ಚರಿಕೆ ನೀಡಿದ್ದಾರೆ. ಒಟ್ಟಾರೆ ಯಾಗಿ ಈ ಆತ್ಮಹತ್ಯಾ ಪ್ರಕರಣ ಯಾವ ಮಜಲನ್ನು ತಲುಪುತ್ತದೆ ಎನ್ನುವುದನ್ನು ಕಾದು ನೋಡಬೇಕಿದೆ.

# ಮನ್ನಾಏಖೆಳ್ಳಿಯಲ್ಲಿ ಚಾಲಕನ ಬರ್ಬರ ಕೊಲೆ!

**ಬೀದರ**

✍ ವೀರಶೆಟ್ಟಿ ಕುಂಬಾರ

**ಅಕ್ಟೋಬರ್ 02,2025 ರ ರಾತ್ರಿ ವೇಳೆ ಕಾರ್ ಚಾಲಕನೋರ್ವನನ್ನು ಭೀಕರವಾಗಿ ಕೊಲೆ ಮಾಡಿರುವ ಘಟನೆ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ಮನ್ನಾಏಖೆಳ್ಳಿ ಗ್ರಾಮದಲ್ಲಿ ನಡೆದಿದೆ. ಜೆಸ್ಕಾಂ - ವಿಜಯ್ ಗ್ಯಾರೇಜ್ ಬಳಿ ಚಾಕುವಿನಿಂದ ಇರಿದು, ಕಲ್ಲಿನಿಂದ ತಲೆ ಜಜ್ಜಿ ಗಣಪತಿ ವಗ್ಗೇರಿ (32) ಎಂಬಾತನನ್ನು ಮರ್ಡರ್ ಮಾಡಲಾಗಿದ್ದು, ಹಳೇ ವೈಷಮ್ಯದ ಹಿನ್ನಲೆಯಲ್ಲಿ ಈ ಕೊಲೆ ನಡೆದಿದೆ ಎನ್ನಲಾಗಿದೆ.**


ಗಣಪತಿ ವಗ್ಗೇರಿ ಬದುಕಿದ್ದಾಗ

ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲೂಕಿನ ಮನ್ನಾಏಖೆಳ್ಳಿ ಗ್ರಾಮದಲ್ಲಿ ಗಣಪತಿ ವಗ್ಗೇರಿ (32) ಎಂಬ ಕಾರ್ ಚಾಲಕನನ್ನು ಭೀಕರವಾಗಿ ಕೊಲೆ ಮಾಡಲಾಗಿದೆ. ಗಣಪತಿ ಯಾರ ಜೊತೆಗೂ ಜಗಳ, ಗಲಾಟೆ ಮಾಡಿಕೊಳ್ಳದೆ ಅವರಿವರ ಕಾರು ಚಾಲಕನಾಗಿ ಕೆಲಸ ಮಾಡುತ್ತಿದ್ದ. ಮನೆಗೆ ದಿಕ್ಕಾಗಿದ್ದ ಮನೆ ಮಗನ ಕಳೆದುಕೊಂಡಿರೋ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

**ಮೂರು ಮಕ್ಕಳಿವೆ!**

ಗಣಪತಿಗೆ 09 ವರ್ಷಗಳ ಹಿಂದೆ ಅಲಿಯಂಬರ ಗ್ರಾಮದ ಸ್ವಪ್ನಳೊಂದಿಗೆ ಮದುವೆಯಾಗಿದ್ದು,ಈ ದಂಪತಿಗೆ ಪುಟ್ಟ ಪುಟ್ಟ ಮೂರು ಮಕ್ಕಳಿವೆ! ಮೊದಲು ಲಾರಿ ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ ಗಣಪತಿ ಈಗ ಕಾರ್ ಓಡಿಸುತ್ತಿದ್ದ. ಸ್ವಂತ ಕಾರ್ ಇರಲಿಲ್ಲ.ಅವರಿವರ ಕಾರು ಚಾಲಕನಾಗಿ ಕೆಲಸ ಮಾಡಿಕೊಂಡಿದ್ದ. ಚಿಕ್ಕಂದಿನಿಂದಲೂ


ಭೀಕರವಾಗಿ ಕೊಲೆಯಾದ ಗಣಪತಿ

ಶಾಂತ ಸ್ವಭಾವದವರಾಗಿದ್ದು, ಯಾರ ಜೊತೆಗೂ ಜಗಳ ವಾಡಿದ ಉದಾಹರಣೆ ಇಲ್ಲ. ತಾನಾಯಿತು ತನ್ನ ಕೆಲಸ ವಾಯಿತು ಎಂದುಕೊಂಡಿದ್ದ. ಆಸ್ತಿ ಅಂತಾ ಏನು ಇಲ್ಲದಿದ್ದರೂ ನಾಲ್ಕು ಜನ ಅಣ್ಣತಮ್ಮಂದಿರು ಅನ್ಯೋನ್ಯವಾಗಿದ್ದು ಕೂಲಿ ಕೆಲಸ ಮಾಡುತ್ತಾ ನ್ಯಾಯವಾದ ಬದುಕು ಕಟ್ಟಿಕೊಂಡಿದ್ದರು.

ಮನ್ನಾ ಏಖೆಳ್ಳಿಯ ಅಡೆಮ- ದಿ. ವೈಜಿನಾಥ್‌ವಗ್ಗೇರ ದಂಪತಿಗಳ ಮಕ್ಕಳು ಇವರು. ಭೀಮೇಶಿ, ಮಾರುತಿ, ಗಣಪತಿ ಮತ್ತು ರಘುಪತಿ. ಎಲ್ಲರಿಗೂ ಮದುವೆಯಾಗಿದ್ದು ಒಂದೇ ಮನೆಯಲ್ಲಿ ವಾಸಿಸುತ್ತಿದ್ದರು. ಗಣಪತಿ ಕಾರ್ ಚಾಲಕನಗಿದ್ದರೂ ಬಿಡುವು ಸಿಕ್ಕಾಗ ವಿಜಯ್ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕುವ ಕೆಲಸವನ್ನು ಮಾಡುತ್ತಿದ್ದ.

**ಮುಗಿಲು ಮುಟ್ಟಿದ ಕುಟುಂಬಸ್ಥರ ಆಕ್ರಂದನ**

ಇಂಥ ಒಳ್ಳೆ ಕುಟುಂಬದ, ಆ ಕುಟುಂಬಕ್ಕೆ ದಿಕ್ಕಾಗಿದ್ದ ಗಣಪತಿ ಕೊಲೆಯ ಸುದ್ದಿ ಹಬ್ಬುತ್ತಿದಂತೆ ಊರಿಗೆ ಊರೇ ಬೆಚ್ಚಿ ಬಿದ್ದಿತ್ತು. ವಿಜಯದಶಮಿ ಹಬ್ಬದ ಸಡಗರದಲ್ಲಿದ್ದ ಗ್ರಾಮಸ್ಥರಿಗೆ ಈ ವಿಚಾರ ಬರಸಿಡಿಲಿನಂತೆ ಅಪ್ಪಳಿಸಿದ್ದು, ಗಣಪತಿಯನ್ನ ಕೊಂದಿದ್ದು ಯಾರು? ಯಾಕೆ ಕೊಂದರು? ಎಂದು ಬೊಬ್ಬಿಡುತ್ತ ಎದೆಬಿರಿಯೆ ಅತ್ತಿದ್ದರು.


ಆರೋಪಿಗಳಾದ ಸಚಿನ್‌ಕುಮಾರ್, ಭದ್ರೇಶ್, ಅನಿಲ್‌ಕುಮಾರ್, ಶಿವಕುಮಾರ್, ಮಲ್ಲು ಅಲಿಯಾಸ್ ಮಲ್ಲಿಕಾರ್ಜುನ

ಗಣಪತಿ ಕುಟುಂಬದಿಂದ ದೂರು ಪಡೆದುಕೊಂಡು


ಎಸ್ಪಿ ಪ್ರದೀಪ್ ಗುಂಟಿ


ಅ|| ಎಸ್ಪಿ ಚಂದ್ರಕಾಂತ್ ಪೂಜಾರಿ


ಡಿವೈಎಸ್ಪಿ ಮಡೋಳಪ್ಪ ಪಿ.ಎಸ್.


ಕೊಲೆ ಪ್ರಕರಣ ದಾಖಲಿಸಿಕೊಂಡ ಮನ್ನಾಏಖೆಳ್ಳಿ ಪೊಲೀಸರು, ತನಿಖೆ ಕೈಗೊಂಡು ಆರೋಪಿಗಳಿಗಾಗಿ ಶೋಧ ಆರಂಭಿಸಿದ್ದರು. ಮನೆಮಗ ನಡು ರಸ್ತೆಯಲ್ಲಿ ಹೆಣವಾಗಿದ್ದು ಕಂಡು ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಗಣಪತಿಗೆ ಯಾರೂ ಶತ್ರುಗಳು ಇರಲಿಲ್ಲ. ಹೀಗಿದ್ದರೂ ಆತನನ್ನು ಭೀಕರವಾಗಿ ಕೊಲೆ ಮಾಡಲಾಗಿದ್ದು, ಚಿಕ್ಕ ಚಿಕ್ಕ ಮೂರು ಮಕ್ಕಳು ತಬ್ಬಲಿಗಳಾಗಿದ್ದಾರೆ. ಯಾರು ಕೊಲೆ ಮಾಡಿದ್ದಾರೋ ಅವರಿಗೆ ಕಠಿಣ ಶಿಕ್ಷೆಯಾಗಬೇಕು ಎಂದು ಕಣ್ಣೀರಿಡುತ್ತ ಗಣಪತಿ ಸಹೋದರ ಭೀಮಶಿ ಪೊಲೀಸರನ್ನು ವಿನಂತಿಸಿದ್ದ.

**ಪತ್ನಿಗೆ ಮಾಹಿತಿ ನೀಡಿದ್ದ...!**

ತನಿಖೆಯ ಸಂದರ್ಭದಲ್ಲಿ, ಕೊಲೆಯಾದ ಗಣಪತಿ ವಗ್ಗೇರಿ ಪತ್ನಿಯಿಂದ ಪೊಲೀಸರಿಗೆ ಒಂದು ಮಾಹಿತಿ ಸಿಕ್ಕಿತ್ತು. ಗಣಪತಿ ಅಂದು


ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು ಹಾಗೂ ಸಾರ್ವಜನಿಕರು


ಸಿಪಿಐ ಗುರು ಪಾಟೀಲ್


ಪಿಎಸ್‌ಐ ಮಹೇಂದ್ರಕುಮಾರ್


ಪಿಎಸ್‌ಐ ನಿಂಗಪ್ಪ

ರಾತ್ರಿ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದಾಗ, ಅದೇ ಗ್ರಾಮದ ಸಚಿನ್ ಮತ್ತು ಭದ್ರು ಪೆಟ್ರೋಲ್ ಹಾಕಿಸಿಕೊಳ್ಳಲು ಅಲ್ಲಿಗೆ ಬಂದಿದ್ದು, ಪೆಟ್ರೋಲ್ ಬಂಕ್ ಹತ್ರಾನೇ ಅವರು ಸಿಗರೇಟ್ ಸೇದುತ್ತಿದ್ದು, ಅದನ್ನು ನೋಡಿ ಸಿಟ್ಟಾದ ಗಣಪತಿ, ದೂರ ಹೋಗಿ ಸೇದ್ರೋ.... ಎಂದು ರೇಗಿದ್ದನಂತೆ... ಗಣಪತಿ ಮನೆಗೆ ಬರುವುದು ತಡವಾದಾಗ ಪತ್ನಿ ಸ್ವಪ್ನ ಗಂಡನಿಗೆ ಫೋನ್ ಮಾಡಿದ್ದಾಗ, ಇದನ್ನು ಗಣಪತಿಯೇ ಹೇಳಿದ್ದನಂತೆ.

ನಾನು ಬರೋದು ತಡವಾಗುತ್ತೆ, ಸದ್ಯ ತಾನು ನರಸಪ್ಪ ಹಾಗೂ ನಿಡವಂಚ ಗ್ರಾಮದ ಬಾಬು ಅವರ ಜೊತೆ ಶಕ್ತಿ ಡಾಭಾಗೆ ಊಟಕ್ಕೆ ಹೋಗ್ತಿದ್ದೇನೆ.... ಎಂದು ಕೂಡ ಹೇಳಿದ್ದನಂತೆ. ಇನ್ನೊಂದು ಮುಖ್ಯ ವಿಷಯ ಏನೆಂದರೆ, ಗಣಪತಿ ಕೆಲ ಮಾಸಗಳ ಹಿಂದೆ ಈ ಸಚಿನ್ ಮತ್ತು ಭದ್ರು ಯುವತಿಯೊಬ್ಬಳ ಹಿಂದೆ ಬಿದ್ದಿದ್ದು, ಆವಾಗಲೂ ಇಬ್ಬರಿಗೂ ಎಚ್ಚರಿಕೆ ನೀಡಿದ್ದನಂತೆ! ಪೊಲೀಸರಿಗೆ ಇಷ್ಟು ಮಾಹಿತಿ ಸಾಕಾಗಿತ್ತು.

**ಮೂರೇ ತಾಸಿನಲ್ಲಿ ಆರೋಪಿಗಳು ಅಂದರ್**

ಹುಮ್ನಾಬಾದ್ ಪ್ರಭಾರಿ ಸಿಪಿಐ ಗುರು ಪಾಟೀಲ, ಪಿಎಸ್‌ಐ ಮಹೇಂದ್ರ ಕುಮಾರ್, ಭೀಮಳ ಖೇಡ ಪಿಎಸ್‌ಐ ನಿಂಗಪ್ಪ ಮಣ್ಣೂರ, ಹೆಚ್‌ಸಿಗಳಾದ ಮಾರುತಿ ರೆಡ್ಡಿ, ಮುಬಿನ, ಗುರುನಾಥ, ಪಿಸಿ ಗಳಾದ ರಾಜು ರೆಡ್ಡಿ ಸಂಜುಕುಮಾರ್, ಹಣಮಂತ. ಎಲ್, ನಂದಕುಮಾರ ಮತ್ತು ಆಸ್ಥೆಕ್ ಮುಂತಾದವರ ತಂಡವು ಮಿಂಚಿನ ಕಾರ್ಯಾಚರಣೆ ನಡೆಸಿ, ಘಟನೆ ನಡೆದ ಮೂರು ತಾಸಿನ ಒಳಗೆ ಕೊಲೆ ಆರೋಪಿಗಳನ್ನು ಪತ್ತೆಹಚ್ಚಿ ಎಡೆಮುರಿ ಕಟ್ಟಿದ್ದಾರೆ.

ಸಚಿನ್‌ಕುಮಾರ್ ತಂದೆ ಸುಭಾಸ್ ಚಂದ್ರ ಐನೋಳ್ಳಿ, ಭದ್ರು (ಭದ್ರೇಶ್) ತಂದೆ ಇಂದ್ರಜಿತ್ ರೇಕುಳಿಗಿಕರ್, ಅನಿಲ್ ಕುಮಾರ್ ತಂದೆ ಶಿವರಾಜ ಮದಾನೋರ,


ಮೃತನ ತಾಯಿ ಅಡೆಮ್ಮ, ಅತ್ತಿಗೆ ಪ್ರೀತಿ

ಶಿವಕುಮಾರ್ ತಂದೆ ದೇವಿಂದ್ರ ಹಳ್ಳಿಖೇಡ ಹಾಗೂ ತಲೆ ಮರೆಸಿಕೊಂಡಿದ್ದ ಮಲ್ಲು ಅಲಿಯಾಸ್ ಮಲ್ಲಿಕಾರ್ಜುನ ಚಿಕಾರನನ್ನು ಬಂಧಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಟಾಧಿಕಾರಿ ಪ್ರದೀಪ್ ಗುಂಟಿ ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ ಹಾಗೂ ಡಿವೈ ಎಸ್ಪಿ ಮಂಡೋಳಪ್ಪನವರ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದು ಸಿಪಿಐ ಗುರು ಪಾಟೀಲ ಮತ್ತು ಟೀಮ್ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.


ಸಿಬ್ಬಂದಿ ವರ್ಗದವರಾದ ಮಾರುತರಡ್ಡಿ, ಮುಬೀನ, ನಂದುಕುಮಾರ್, ಸಂಜು ರಾಠೋಡ್, ಹನುಮಂತ ಎಲ್., ರಾಜರಡ್ಡಿ

# ಸೌಜನ್ಯ ಫೈಲ್ಸ್



2

ನಿರೂಪಣೆ :

ಮೋಹನ್ ಬೋಳಂಗಡಿ

# ಬೆಳ್ತಂಗಡಿಯಲ್ಲಿ ನಡೆಯಿತು ಮರಣೋತ್ತರ ಪರೀಕ್ಷೆ

ನಾಪತ್ತೆಯಾಗಿದ್ದ ಸೌಜನ್ಯಳ ಮೃತದೇಹ ಅತ್ಯಾಚಾರಕ್ಕೊಳಗಾಗಿ ಹತ್ಯೆಗೀಡಾದ ಸ್ಥಿತಿಯಲ್ಲಿ ಪತ್ತೆಯಾದ ತಕ್ಷಣ ಪೊಲೀಸರು ಮಾಡಬೇಕಾಗಿದ್ದಂತಹ ಮೊದಲ ಕೆಲಸ ಅಂದರೆ 9–10–2012ರಂದು ರಾತ್ರಿ 10.30ರ ವೇಳೆಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಸೌಜನ್ಯಳ ತಂದೆ ಚಂದಪ್ಪಗೌಡರು ನೀಡಿದ್ದ ನಾಪತ್ತೆ ದೂರನ್ನು ಮಾರ್ಪಾಡುಗೊಳಿಸಿ ಅತ್ಯಾಚಾರ ಮತ್ತು ಕೊಲೆ ಆರೋಪದಡಿಯಲ್ಲಿ ದೂರು ದಾಖಲಿಸಬೇಕಿತ್ತು. ನಾಪತ್ತೆ ದೂರು ನೀಡಿದಂತಹ ಚಂದಪ್ಪಗೌಡರು ಮಗಳ ಮೃತದೇಹ ನೋಡಿದ ತಕ್ಷಣ ಅಸ್ವಸ್ಥಗೊಂಡಿದ್ದರು. ಅಲ್ಲಿ ನೆರೆದಿದ್ದವರು ಅವರನ್ನು 2ಕಿ.ಮಿ. ದೂರದಲ್ಲಿದ್ದ ಮನೆಗೆ ಕರೆದೊಯ್ದಿದ್ದರು. ಪೊಲೀಸರು ದೂರು ದಾಖಲಿಸಿಕೊಳ್ಳಲು ಅವರ ಕುಟುಂಬ ವರ್ಗಕ್ಕೆ ಸೇರಿದ ವ್ಯಕ್ತಿಗಾಗಿ ವಿಚಾರಿಸಿದರು. ಸೌಜನ್ಯಳ ಮಾವ ಅಂದರೆ ತಾಯಿ ಕುಸುಮಾವತಿಯವರ ಸಹೋದರ ವಿಠ್ಠಲಗೌಡರು ಸಹ ದೂರು ಕೊಡುವಂತಹ ಪರಿಸ್ಥಿತಿಯಲ್ಲಿರಲಿಲ್ಲ. ಆದ್ದರಿಂದ ಪೊಲೀಸರು ಸ್ಥಳದಲ್ಲಿ ಇದ್ದಂತಹ ಸೌಜನ್ಯಳ ಹತ್ತಿರದ ಸಂಬಂಧಿಯಾಗಿದ್ದ ಬೆಳ್ತಂಗಡಿ ತಾಲೂಕಿನ ಹೊರಂಗಡಿ ಗ್ರಾಮದ ಕಜೆಬೆಟ್ಟು ಮನೆಯ ಜಗದೀಶ್ ಗೌಡ ಎಂಬವರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ದೂರು ನೀಡುವಂತೆ ಕೋರಿದರು.

ಪೊಲೀಸರ ಸೂಚನೆಯಂತೆ ಜಗದೀಶ್ ಗೌಡ ಅವರು ದೂರು ನೀಡಿದರು. ಅದರಂತೆ ಅಪರಿಚಿತ ವ್ಯಕ್ತಿಗಳ ಮೇಲೆ ಅತ್ಯಾಚಾರ ಮತ್ತು ಕೊಲೆ ಪ್ರಕರಣ ದಾಖಲಾಯಿತು. ಬೆಳ್ತಂಗಡಿ ಪೊಲೀಸ್ ಠಾಣೆಯ ಅಪರಾಧ ಕ್ರಮಾಂಕ 250/12ರಲ್ಲಿ ದೂರು ದಾಖಲಾಯಿತು. ಈ ದೂರಿನಲ್ಲಿ ಜಗದೀಶ್ ಗೌಡ ಅವರು ಸ್ಪಷ್ಟವಾಗಿ ಈ ಕೆಳಗಿನಂತೆ ಉಲ್ಲೇಖಿಸುತ್ತಾರೆ.

ದಿನಾಂಕ 10.10.2012ರಂದು ಬೆಳಿಗ್ಗೆ ಸುಮಾರು 7 ಗಂಟೆಯಿಂದ ಹಿಂದಿನ ದಿನ ನಾಪತ್ತೆಯಾಗಿದ್ದ ಸಂಬಂಧಿ ಸೌಜನ್ಯಳನ್ನು ರಮೇಶ, ಉಮೇಶ, ಗಣೇಶ,ದಿನೇಶ ಮೊದಲಾದ ಯುವಕರೊಂದಿಗೆ ಸೇರಿಕೊಂಡು ನೇತ್ರಾವತಿ ಸ್ನಾನಘಟ್ಟದ ಬಳಿಯ ಮಣ್ಣಸಂಕದ ಸುತ್ತಮುತ್ತ ಹುಡುಕಾಟ ನಡೆಸುತ್ತಿದ್ದ ಸಂದರ್ಭದಲ್ಲಿ ಮಧ್ಯಾಹ್ನ 12.30 ರ ಗಂಟೆಗೆ ಬೆಳ್ತಂಗಡಿ ತಾಲೂಕು ಧರ್ಮಸ್ಥಳ ಗ್ರಾಮದ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರದ ಬಳಿ ಇರುವ ಮಣ್ಣಸಂಕ ಎಂಬಲ್ಲಿ ಸೌಜನ್ಯಳ ಮೃತದೇಹ ಪತ್ತೆಯಾಗಿದ್ದು, ಆಕೆಯನ್ನು ಯಾರೋ ದುಷ್ಕರ್ಮಿಗಳು ಆಕೆ ಇಚ್ಛೆಗೆ ವಿರುದ್ಧವಾಗಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಬಲತ್ಕಾರವಾಗಿ ಅತ್ಯಾಚಾರ ನಡೆಸಿ ಕೊಲೆ ಮಾಡಿರುತ್ತಾರೆ. ಮೃತದೇಹವು ಧರ್ಮಸ್ಥಳ ಬೆಳ್ತಂಗಡಿ ರಸ್ತೆಯ ಪಶ್ಚಿಮ ಭಾಗದಲ್ಲಿ ನೀರು ಹರಿದು ಹೋಗುವ ತೋಡಿನ ಸಮೀಪ ಮಣ್ಣಸಂಕ ಎಂಬಲ್ಲಿ ಕಾಡುಗಿಡಗಳಿರುವ ಪ್ರದೇಶದಲ್ಲಿ ಮರವೊಂದರ ಬುಡದ ಬಳಿ ಇರುವುದಾಗಿ ಲಿಖಿತ ದೂರು ನೀಡುತ್ತಾರೆ. ಆ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಬೆಳ್ತಂಗಡಿ ಠಾಣಾ ಪಿಎಸ್ಐ ಯೋಗೀಶ್ ಕುಮಾರ್ ದೂರು ಸ್ವೀಕರಿಸಿ ತನ್ನ ಜೊತೆ ಇದ್ದ ಪಿಸಿ ಸುಂದರ್ ಶೆಟ್ಟಿ ಅವರಲ್ಲಿ ಪ್ರಕರಣ ದಾಖಲಿಸಲು ಬೆಳ್ತಂಗಡಿ ಪೊಲೀಸ್ ಠಾಣೆಗೆ ಕಳುಹಿಸಿಕೊಟ್ಟರು. ಮಧ್ಯಾಹ್ನ 2.30ರ ವೇಳೆಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಅಪರಾಧ ಕ್ರಮಾಂಕ 250/12 ಕಲಂ 376,302 ಐಪಿಸಿಯಂತೆ ಪ್ರಕರಣ ದಾಖಲಾಯಿತು.


ಮೃತದೇಹ ಪತ್ತೆಯಾದಂತಹ ಸ್ಥಳದಲ್ಲಿ ಎಸ್ಐ ಯೋಗೀಶ್ ಕುಮಾರ್ ಮತ್ತವರ ಸಿಬ್ಬಂದಿಗಳು ಸೂಕ್ಷ್ಮವಾಗಿ ಪರಿಸರವನ್ನು ಗಮನಿಸಿದರು. ಸ್ಥಳೀಯರ ಮಾಹಿತಿಯ ಪ್ರಕಾರ ಸೌಜನ್ಯಳು ಎಸ್‌ಡಿಎಂ ಉಜಿರೆ ಕಾಲೇಜಿನಿಂದ 9.10.2012ರಂದು ಸಂಜೆ 4.15ರ ವೇಳೆಗೆ ನೇತ್ರಾವತಿ ಸ್ನಾನಘಟ್ಟದ ಬಳಿ ಕೆ.ಎಸ್ಸಾರ್ಟಿಸಿ ಬಸ್ಸಿನಿಂದ ಇಳಿದಿದ್ದಳು. ತುಂತುರು ಮಳೆ ಬರುತ್ತಿದ್ದುದರಿಂದ ಕೊಡೆ ಹಿಡಿದುಕೊಂಡಿದ್ದಳು. ರಸ್ತೆಯ ಎಡಭಾಗದಲ್ಲೇ ನಡೆದುಕೊಂಡು ಬರುತ್ತಿದ್ದಾಗ ಧರ್ಮಸ್ಥಳ ಮಂಜುನಾಥೇಶ್ವರ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರದ ಕಾವಲುಗಾರ ಜನಾರ್ಧನ್ ಅವರು ಗೇಟಿನಲ್ಲೇ ಇರುವ ಕಾವಲು ಕೊಠಡಿಯಲ್ಲಿ ಇದ್ದರು. ಅವರನ್ನು ನೋಡಿದ ಸೌಜನ್ಯ ಸಹಜ ಎಂಬಂತೆ ಕಿರುನಗೆ ಬೀರಿ ವಿಶ್ ಮಾಡಿ ರಸ್ತೆಯ ಬಲಬದಿಗೆ ಹೊರಳಿಕೊಂಡಳು. ಅಲ್ಲಿಂದ ಆಕೆಯನ್ನು ಪ್ರತ್ಯಕ್ಷವಾಗಿ ಕಂಡವರಿಲ್ಲ. ಈ ಅಂಶವನ್ನು ಗಮನಿಸಿದ ಎಸ್ಐ ಯೋಗೀಶ್ ಅವರು ಗಿಡಗಂಟಿಗಳಿಂದ ಆವೃತ್ತವಾಗಿದ್ದ ಸ್ಥಳವನ್ನು ಸೂಕ್ಷ್ಮವಾಗಿ ಅವಲೋಕಿಸತೊಡಗಿದ್ದರು. ರಸ್ತೆಯಿಂದ ಮೃತದೇಹ ಸಿಕ್ಕ ಸ್ಥಳದವರೆಗೆ ವ್ಯಕ್ತಿಯೊಬ್ಬ ನಡೆದುಕೊಂಡು ಹೋದಂತಹ ಗುರುತುಗಳು ಪತ್ತೆಯಾಯಿತು. ನೀರು ಹರಿಯುವ ತೋಡನ್ನು ದಾಟಿ ಆಕೆಯನ್ನು ನಿರ್ಜನ ಪ್ರದೇಶಕ್ಕೆ ಹೊತ್ತೊಯ್ದದಕ್ಕೆ ಸಾಕ್ಷ್ಯಗಳು ಸಿಕ್ಕಿದ್ದವು. ಈ ವೇಳೆಗಾಗಲೇ ಮಾಹಿತಿ ತಿಳಿದು ದಕ್ಷಿಣ ಕನ್ನಡ ಜಿಲ್ಲಾ ಎಸ್ಪಿ ಅಭಿಷೇಕ್ ಗೋಯಲ್, ಪುತ್ತೂರು ಎಎಸ್ಪಿ ಅನುಚೇತ್ ಮಂಗಳೂರಿನಿಂದ ಶ್ವಾನದಳ, ಎಫ್‌ಎಸ್‌ಎಲ್ ತಜ್ಞರ ತಂಡ ಸ್ಥಳಕ್ಕೆ ಬಂದಿತ್ತು. ಪರಿಸ್ಥಿತಿಯನ್ನು ಅವಲೋಕಿಸಿದ ಶ್ವಾನದಳದ ಟ್ರೈನರ್ ಸುಳಿವು ನೀಡಬಲ್ಲಂತಹ ಶ್ವಾನವನ್ನು ಪೊಲೀಸ್ ವ್ಯಾನ್‌ನಿಂದ ಕೆಳಗೆ ಇಳಿಸಲೇ ಇಲ್ಲ. ಕಾರಣ ಏನೆಂದರೆ ಮಳೆ ಬಂದಿದ್ದರಿಂದ ಯಾವುದೇ ರೀತಿಯ ವಾಸನೆಯನ್ನು ಗ್ರಹಿಸಲು ಶ್ವಾನಕ್ಕೆ ಸಾಧ್ಯವಾಗುವುದಿಲ್ಲ ಎಂಬ ಅಭಿಪ್ರಾಯ ಅವರದ್ದಾಗಿತ್ತು. ಎಫ್‌ಎಸ್‌ಎಲ್ ತಜ್ಞರು ಮೃತದೇಹದ ಮೈಮೇಲಿದ್ದ ಮತ್ತು ಗುಪ್ತಾಂಗದಲ್ಲಿದ್ದ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಿದರು ಮತ್ತು ಇತರ ಸಾಕ್ಷ್ಯಗಳನ್ನು ಗುರುತಿಸಿಕೊಂಡರು.



ಅಭಿಷೇಕ್ ಗೋಯಲ್



ಅನುಚೇತ್



ಯೋಗೀಶ್‌ಕುಮಾರ್

ಜಿಲ್ಲಾ ಎಸ್ಪಿ ಅಭಿಷೇಕ್ ಗೋಯಲ್, ಎಎಸ್ಪಿ ಅನುಚೇತ್ ಸ್ಥಳದಲ್ಲಿ ಮುಂದಿನ ತನಿಖೆಗೆ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ಅವರ ಸೂಚನೆಯಂತೆ ಎಸ್ಐ ಯೋಗೀಶ್ ಮತ್ತು ಎಫ್‌ಎಸ್‌ಎಲ್ ತಜ್ಞರು ಮೃತದೇಹದ ತನಿಖೆ ಕಾರ್ಯವನ್ನು ನಡೆಸುತ್ತಿದ್ದರು. ಆ ವೇಳೆಗಾಗಲೇ ಸಾವಿರಾರು ಮಂದಿ ಘಟನಾ ಸ್ಥಳದ ಸುತ್ತ ನೆರೆದಿದ್ದರು. ಪೊಲೀಸರ ತಂಡ ಪ್ರತಿಯೊಂದು ಸೊತ್ತುಗಳನ್ನು ಮಹಜರು ಮೂಲಕ ಸ್ವಾಧೀನ ಪಡಿಸಿಕೊಳ್ಳುತ್ತಿದ್ದರು. ಮೃತದೇಹದ ಮೇಲೆ ಬಿಳಿ ಬಟ್ಟೆಯನ್ನು ಹಾಕಲಾಗಿತ್ತು. ಆಕೆಯ ಶಾಲಾ ಸಮವಸ್ತ್ರದ ಪ್ಯಾಂಟ್ ಮೃತದೇಹದ ಪಕ್ಕದಲ್ಲೇ ಇತ್ತು. ಆಕೆ ಧರಿಸಿದ್ದ ಚಪ್ಪಲಿ ಬೇರೆ ಬೇರೆ ಕಡೆಗಳಲ್ಲಿ ಇತ್ತು. ಆಕೆಯ ಶಾಲಾ ಬ್ಯಾಗ್ ದೂರದಲ್ಲಿ ಬಿದ್ದುಕೊಂಡಿತ್ತು. ಆಕೆ ಹಿಡಿದುಕೊಂಡಿದ್ದಂತಹ ಕೊಡೆ ರಸ್ತೆ ಪಕ್ಕದ ಮರದ ಬುಡದ ಗಿಡಗಂಟಿಗಳ ಮಧ್ಯೆ ಸಿಲುಕಿಕೊಂಡಿತ್ತು. ಘಟನಾ ಸ್ಥಳವನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿದಾಗ ದುಷ್ಕರ್ಮಿ ಆಕೆಯನ್ನು ರಸ್ತೆಯ ಪಕ್ಕದ ಮರದ ಬುಡದಿಂದಲೇ ಅನಾಮತ್ತಾಗಿ ಎತ್ತಿಕೊಂಡು ಪಕ್ಕದ ತೋಡನ್ನು ದಾಟಿ ಗಿಡಗಂಟಿಗಳ ಮಧ್ಯೆಯೇ ಅಂಗಾತ ಮಲಗಿಸಿ ಅತ್ಯಾಚಾರ ನಡೆಸಲು ಪ್ರಯತ್ನ ಪಟ್ಟಂತಹ ಕುರುಹುಗಳು ಕಂಡು ಬಂದಿದ್ದವು. ಅತ್ಯಾಚಾರಗೈಯ್ಯಲು ಸಾಧ್ಯವಾಗದ ಸ್ಥಿತಿಯಲ್ಲಿ ಆಕೆಯ ಶಾಲಾ ಗುರುತಿನ ಚೀಟಿಯ ಟ್ಯಾಗ್‌ನಲ್ಲಿ ಎಳೆದು ಮತ್ತೊಂದು ಭಾಗಕ್ಕೆ ಕೊಂಡೊಯ್ದು ಹಾಕಿದಂತಹ ಕುರುಹುಗಳು ಇದ್ದವು. ಶಾಲಾ ಗುರುತಿನ ಚೀಟಿಯ ಟ್ಯಾಗ್‌ನಲ್ಲಿಯೇ ಆಕೆಯನ್ನು ಸ್ವಲ್ಪ ದೂರಕ್ಕೆ ಎಳೆದುಕೊಂಡು ಹೋಗಿದ್ದರಿಂದ ಕತ್ತಿನ ಭಾಗದಲ್ಲಿ ಸುಮಾರು ಅರ್ಧ ಇಂಚಿನಷ್ಟು ಆಳಕ್ಕೆ ಗಾಯವಾಗಿತ್ತು. ಟ್ಯಾಗ್ ಆ ಗಾಯದಲ್ಲಿಯೇ ಸಿಲುಕಿ ಕೊಂಡಿತ್ತು. ಎಎಸ್ಪಿ ಅನುಚೇತ್ ಅವರೇ ಸೂಕ್ಷ್ಮವಾಗಿ ತೆಗೆದು ಮಹಜರು ನಡೆಸಲು ನೀಡಿದ್ದರು. ಈ ಎಲ್ಲಾ ಪ್ರಕ್ರಿಯೆಗಳು ಮುಗಿಯುವಾಗ ಸಂಜೆ ಸುಮಾರು 5.30 ಆಗಿತ್ತು. ಆ ವೇಳೆಗಾಗಲೇ ಬೆಳ್ತಂಗಡಿ ಪೊಲೀಸರು ಬೆಳ್ತಂಗಡಿ ಸಮುದಾಯ ಆಸ್ಪತ್ರೆಯ ವೈದ್ಯ ಡಾಕ್ಟರ್ ಆದಮ್ ಅವರಿಗೆ ಮಾಹಿತಿ ನೀಡಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾಗಿರುವ ತರುಣಿಯ ಮೃತದೇಹದ ಮರಣೋತ್ತರ ಪರೀಕ್ಷೆಗೆ ಸಿದ್ಧತೆ ಮಾಡುವಂತೆ ಸೂಚನೆ ನೀಡಿದ್ದರು. ಆ ಆಸ್ಪತ್ರೆಯಲ್ಲಿ ಮಹಿಳಾ ವೈದ್ಯಾಧಿಕಾರಿ ಇಲ್ಲದೇ ಇದ್ದುದರಿಂದ ತಾಲೂಕು ವೈದ್ಯಾಧಿಕಾರಿಗಳಿಗೆ ಮಾಹಿತಿ ನೀಡಿ ಉಜಿರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾಕ್ಟರ್ ರಶ್ಮಿ ಅವರನ್ನು ಬೆಳ್ತಂಗಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕಳುಹಿಸಿಕೊಡುವಂತೆ ಕೋರಿಕೊಂಡಿದ್ದರು. ವೈದ್ಯರ ತಂಡ ಆಸ್ಪತ್ರೆಯಲ್ಲಿ ಮೃತದೇಹಕ್ಕಾಗಿ ಕಾಯುತ್ತಿರುವಾಗಲೇ ಸಮಯ ಮೀರುತ್ತಿತ್ತು. ಆ ಸಮುದಾಯ ಆಸ್ಪತ್ರೆಯಲ್ಲಿ ಕತ್ತಲೆಯಾದರೆ ಮರಣೋತ್ತರ ಪರೀಕ್ಷೆ ಮಾಡಲು ಬೆಳಕಿನ ವ್ಯವಸ್ಥೆಗಳು ಇರಲಿಲ್ಲ. ಘಟನಾ ಸ್ಥಳದಿಂದ ಮೃತದೇಹವನ್ನು ಆಸ್ಪತ್ರೆಗೆ ತರುವಷ್ಟರಲ್ಲಿ ಕತ್ತಲು ಆವರಿಸಿತ್ತು. ವೈದ್ಯ ಡಾ. ಆದಮ್ ಅವರು ರಾತ್ರಿ ವೇಳೆ ಮರಣೋತ್ತರ ಪರೀಕ್ಷೆ ನಡೆಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಮೃತದೇಹವನ್ನು ಮಂಗಳೂರಿನ ದೇರಳಕಟ್ಟೆಯಲ್ಲಿರುವ ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜಿನ ಆಸ್ಪತ್ರೆಗೆ ಕೊಂಡೊಯ್ಯುವುದು ಸೂಕ್ತ ಎಂಬ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದರು. ಪೊಲೀಸರಿಗೂ ಸಹ ಈ ಅಭಿಪ್ರಾಯ ಸೂಕ್ತವೆನಿಸಿತ್ತು. ಅವರು ಮಂಗಳೂರಿಗೆ ಮೃತದೇಹ ಕೊಂಡೊಯ್ಯಲು ಆ್ಯಂಬ್ಯುಲೆನ್ಸ್ ವ್ಯವಸ್ಥೆ ಮಾಡಿದಂತಹ ಸಂದರ್ಭದಲ್ಲಿ ಈ ಮಾಹಿತಿ ಸ್ಥಳೀಯ ಶಾಸಕ ವಸಂತ ಬಂಗೇರ ಅವರಿಗೆ ತಲುಪಿತು. ಸೌಜನ್ಯಳ ಮನೆಯವರು ವಸಂತ ಬಂಗೇರ ಅವರಲ್ಲಿ ರಾತ್ರಿಯೇ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ದೇಹವನ್ನು ಕೊಡಿಸುವಂತೆ ಕೋರಿಕೆ ಸಲ್ಲಿಸಿದ್ದರು. ಶಾಸಕ ವಸಂತ ಬಂಗೇರ ಅವರು ಎಸ್ಐ ಯೋಗೀಶ್, ವೈದ್ಯಾಧಿಕಾರಿ ಆದಂ ಅವರಿಗೆ ದೂರವಾಣಿ ಕರೆ ಮಾಡಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಬಿಟ್ಟುಕೊಡುವಂತೆ ಸೂಚನೆ ನೀಡಿದರು. ಅವರ ಸೂಚನೆಯಂತೆ ಬೆಳ್ತಂಗಡಿ ಆಸ್ಪತ್ರೆಯಲ್ಲಿ ಜನರೇಟರ್ ವ್ಯವಸ್ಥೆ ಮಾಡಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಮೃತದೇಹದ ಮೈಮೇಲಿದ್ದ ಆಕೆಯ ಶಾಲಾ ಸಮವಸ್ತ್ರವನ್ನು ಶವಾಗಾರದ ಮೂಲೆಯಲ್ಲಿ ಹಾಕಲಾಯಿತು. ಮರ್ಮಾಂಗದಲ್ಲಿ ತುಂಬಿಸಲಾಗಿದ್ದ ಮಣ್ಣನ್ನು ಶೇಖರಿಸಲಾಯಿತು. ಅದನ್ನು ಬಾಟಲಿಯಲ್ಲಿ ಇಡಲಾಯಿತು. ಆ ಮಣ್ಣು ಮಳೆನೀರಿನಿಂದ ತೊಯ್ದು ಹೋಗಿತ್ತು. ಅದರಲ್ಲಿ ಡಿಎನ್‌ಎ ಸ್ಯಾಂಪಲ್ ಸಿಗಬಹುದು ಎಂಬ ನಿರೀಕ್ಷೆ ಪೊಲೀಸರದ್ದಾಗಿತ್ತು. ಇಬ್ಬರು ವೈದ್ಯರು ಮೃತದೇಹದ ಪೋಸ್ಟ್ ಮಾರ್ಟಂ ಮಾಡಿದ್ದರು. ಪ್ರಸೂತಿ ತಜ್ಞೆಯೂ ಆಗಿದ್ದಂತಹ ಡಾ. ರಶ್ಮಿ ಅವರು ಸೌಜನ್ಯಳ ಮರ್ಮಾಂಗವನ್ನು ಸೂಕ್ಷ್ಮವಾಗಿ ಪರೀಕ್ಷೆಗೆ ಒಳಪಡಿಸಿದ್ದರು. ಆಕೆಯ ಮೇಲೆ ಅತ್ಯಾಚಾರ ನಡೆದಿದೆಯೋ ಇಲ್ಲವೋ ಎಂದು ಖಚಿತಪಡಿಸಿಕೊಳ್ಳಲು ಎರಡು ಬೆರಳಿನ ಪರೀಕ್ಷೆಯನ್ನು ನಡೆಸಿದ್ದರು. ಆಗ ಅವರಿಗೆ ಅಚ್ಚರಿಯ ಅಂಶ ಗೋಚರಿಸಿತ್ತು. ಆಕೆಯ ಮರ್ಮಾಂಗದ ಮೇಲೆ ಪುರುಷನ ಜನನಾಂಗ ಪ್ರವೇಶ ಮಾಡಿದಂತಹ ಸಂದರ್ಭದಲ್ಲಿ ಜನನಾಂಗವು ವಿಸ್ತರಿತಗೊಳ್ಳುತ್ತದೆ. ಆದರೆ ಸೌಜನ್ಯಳ ಜನನಾಂಗ ವಿಸ್ತರಿತವಾಗಿರಲಿಲ್ಲ. ಬದಲಾಗಿ ಅವರ ಎರಡು ಬೆರಳುಗಳು ಜನನಾಂಗವನ್ನು ಪ್ರವೇಶಿಸುತ್ತಿರಲಿಲ್ಲ. ಆದ್ದರಿಂದ ಆಕೆಯ ಮೇಲೆ ಅತ್ಯಾಚಾರ ನಡೆದಿದೆ ಎನ್ನುವುದಕ್ಕೆ ಸಾಕ್ಷ್ಯಗಳು ಸಿಗಲಿಲ್ಲ. ಆದರೆ ಆಕೆಯ ಜನನಾಂಗಕ್ಕೆ ಬೆರಳನ್ನು ಹಾಕಿದ್ದರಿಂದ ಲೈಂಗಿಕ ದೌರ್ಜನ್ಯ ನಡೆದಿದ್ದು, ಸ್ಪಷ್ಟವಾಗಿತ್ತು. ಈ ಎಲ್ಲಾ ಅಂಶಗಳನ್ನು ಡಾ. ರಶ್ಮಿ ಸೂಕ್ಷ್ಮವಾಗಿ ದಾಖಲಿಸಿಕೊಂಡಿದ್ದರು. ಡಾ. ಆದಂ ಮರಣೋತ್ತರ ಪರೀಕ್ಷೆ ನಡೆಸಿದ್ದರು. ಎಫ್‌ಎಸ್‌ಎಲ್ ಪರೀಕ್ಷೆಗೆ ಬೇಕಾಗುವಂತಹ ಅವಯವಗಳನ್ನು ಸಂಗ್ರಹಿಸಿದ್ದರು. ರಾತ್ರಿ ಎಂಟು ಗಂಟೆಯ ವೇಳೆಗೆ ಮರಣೋತ್ತರ ಪರೀಕ್ಷೆ ಮುಗಿದು ಕುಟುಂಬಸ್ಥರಿಗೆ ದೇಹವನ್ನು ಹಸ್ತಾಂತರಿಸಲಾಯಿತು. ಅವರು ಅದನ್ನು ಪಾಂಗಾಳಕ್ಕೆ ಕೊಂಡೊಯ್ದು ಮನೆಯಲ್ಲಿ ಅಂತಿಮ ವಿಧಿ ವಿಧಾನಗಳನ್ನು ಪೂರೈಸಿ ದಹನ ಕಾರ್ಯಗಳನ್ನು ನಡೆಸಿದರು.



ಇಲ್ಲಿಗೆ ಈ ಪ್ರಕರಣದ ಒಂದು ಹಂತ ಪೂರ್ಣಗೊಂಡರೆ ಮತ್ತೊಂದು ಹಂತ ಆರಂಭಗೊಂಡದ್ದು ಕೇವಲ 24 ಗಂಟೆಗಳ ಅವಧಿಯಲ್ಲಿ....

(ಮುಂದುವರಿಯುವುದು.....)

# ಉಡುಪಿ ಕೊಕ್ಕರ್ಣೆ ವನ್‌ಸೈಡ್ ಲವ್ ಸ್ಟೋರಿಗೆ ರಕ್ಷಿತಾ-ಕಾರ್ತಿಕ್ ಬಲಿಯಾದರೆ?!

**ಉಡುಪಿ**


✍ ಸಂತೋಷಕುಮಾರ


ಕೊಲೆಯಾದ ರಕ್ಷಿತಾ

ಅದಿನ್ನೂ ಬಾಳಿ ಬದುಕುವ ವಯಸ್ಸು. ಶಾಲೆ, ಕಾಲೇಜು, ಉದ್ಯೋಗ, ಜೀವನದ ಬಗ್ಗೆ ತಲೆಕೆಡಿಸಿಕೊಳ್ಳುವುದು ಇದೇ ವಯಸ್ಸಿನಲ್ಲಿ. ಹಾಗೇನೇ ಜೀವನದ ಮಹತ್ತರವಾದ ಪ್ರೇಮ ಸಂಜೀವನ ಪ್ರಾರಂಭವಾಗುವುದೂ ಇದೇ ವಯಸ್ಸಲ್ಲೇ ಅನ್ನೋ ಹಾಗೆ ಉಡುಪಿ ಜಿಲ್ಲೆಯ ಬ್ರಹ್ಮಾವರದ ಕೊಕ್ಕರ್ಣೆ ಚಗರಿಬೆಟ್ಟು ಪೆಜಮಂಗೂರಿನ ಉದಯ ಪೂಜಾರಿಯವರ ಮಗ ಕಾರ್ತಿಕ (26) ತನ್ನ ದೂರದ ಸಂಬಂಧಿಯಾದ ಸುರೇಶ ಪೂಜಾರಿಯವರ ಮಗಳು ರಕ್ಷಿತಾ (23)ಳನ್ನ ಪ್ರೀತಿಸುತಾ ಇದ್ದ. ವನ್‌ವೇ ಲವ್!


ಡಿವೈಎಸ್ಪಿ ಪ್ರಭು ಡಿ.ಟಿ.


ಸಿಪಿಐ ಗೋಪಾಲಕೃಷ್ಣ


ಪಿಎಸ್‌ಐ ಅಶೋಕ್

ಕಾರ್ತಿಕ ಹಲವಾರು ಬಾರಿ ರಕ್ಷಿತಾಳನ್ನ ಪ್ರೀತ್ಸು ಅಂತಾ ಗೋಗರೆದರೂ ಆಕೆ ಮಾತ್ರ ಕಾರ್ತಿಕ ನನ್ನ ಪ್ರೀತ್ಸೋದಕ್ಕೆ ಸುತಾರಾಂ ಒಪ್ಪದೇ ಅವನಿಂದ ದೂರಾನೇ ಇದ್ದಳು. ಈ ವಿಚಾರವಾಗಿ ಎರಡೂ ಮನೆಯವರ ಮಧ್ಯ ಮದುವೆ ಮಾತುಕತೆ ವಿಫಲವಾಗಿ ಮಾತು ಮುರಿದೋಗಿತ್ತು. ಈ ಪ್ರೀತಿ ಬಗ್ಗೆ ಕಾರ್ತಿಕ ಮತ್ತು ರಕ್ಷಿತಾ ನಡುವೆ ಆಗಾಗ ಜಗಳವಾಗ್ತಾ ಇತ್ತಂತೆ. ಈ ಮಧ್ಯೆ ರಕ್ಷಿತಾಗೆ ಬ್ರಹ್ಮಾವರದ ಸರ್ವೆ ಕಛೇರಿಯಲ್ಲಿ ತಾತ್ಕಾಲಿಕ ಕೆಲಸ ಸಿಕ್ಕಿದೆ. ಕೆಲಸಕ್ಕೆ ಪ್ರತಿದಿನ ಹೋಗಬೇಕಾದರೂ ಕಾರ್ತಿಕ ರಕ್ಷಿತಾಗೆ ಭೇಟಿಯಾಗಿ ಲವ್ ಮಾಡು ಅಂತಾ ಪೀಡಿಸುತ್ತಿದ್ದನಂತೆ.

**ಸ್ವಂತ ಸಂಬಂಧಿಯೇ**

ಸುರೇಶ ಪೂಜಾರಿ ಇವರು ಬ್ರಹ್ಮಾವರ ಚಗರಿಬೆಟ್ಟು ಕೊಕ್ಕರ್ಣೆ ಪೆಜಮಂಗೂರು ಗ್ರಾಮದ ನಿವಾಸಿ.ಇವರಿಗೆ ಒಂದು ಹೆಣ್ಣು, ಒಂದು ಗಂಡು, ಇಬ್ಬರು ಮಕ್ಕಳು. ಇವರಲ್ಲಿ ರಕ್ಷಿತಾ ದೊಡ್ಡವಳು. ಇದೇ ಪೆಜಮಂಗೂರು ಗ್ರಾಮ ಉದಯ ಪೂಜಾರಿ ಸುರೇಶ ಪೂಜಾರಿಗೆ ದೂರದ ಸಂಬಂಧಿಯಾಗಬೇಕು. ಈ ಉದಯ ಪೂಜಾರಿಯವರ ಮಗನೇ ಕಾರ್ತಿಕ. ಉದಯ ಪೂಜಾರಿ ವಯಸ್ಸು ಇಪ್ಪತ್ತಾರು. ಈತ ರಕ್ಷಿತಾಳನ್ನು


ಎಸ್ಪಿ ಹರಿರಾಮ್ ಶಂಕರ್


ಅII ಎಸ್ಪಿ ಸುಧಾಕರ್ ನಾಯ್ಕ್

ಗಾಢವಾಗಿ ಪ್ರೀತಿಸುತ್ತಿದ್ದ. ಆ ವಿಷಯ ರಕ್ಷಿತಾಗೆ ಎಷ್ಟೋ ಸಲ ಹೇಳಿದ್ದ, ಆದರೆ ರಕ್ಷಿತಾ ಮಾತ್ರ ಯಾವುದೇ ಕಾರಣಕ್ಕೂ ಒಪ್ಪಿರಲಿಲ್ಲ. ಅದರಿಂದ ಕಾರ್ತಿಕ ಸಿಟ್ಟಾಗಿದ್ದ, ಸಿಕ್ಕ ಸಿಕ್ಕಲ್ಲಿ ರಕ್ಷಿತಾಗೆ ಲವ್ ಮಾಡು ಅಂತಾ ಗೋಗರೆಯುತ್ತಿದ್ದ.

ಆವತ್ತು ಅದೇ ಚಗರಿಬೆಟ್ಟು ನಿವಾಸಿ ರಕ್ಷಿತಾಳ ಸಂಬಂಧಿ ರಶ್ಮಿ ಬಾರ್‌ನಲ್ಲಿ ವೈಟರ್ ಕೆಲಸ ಮಾಡಿಕೊಂಡಿದ್ದ ರಮೇಶ ಪೂಜಾರಿ ತನ್ನ ಹೆಂಡತಿಯ ತವರುಮನೆಯಾದ ಬಾರ್ಕೂರಿಗೆ ಹೋಗಿದ್ರು. ಮಾರನೇ ದಿನ ಬೆಳಿಗ್ಗೆ ಒಂಭತ್ತು ಗಂಟೆ ಹೊತ್ತಿಗೆ ರಮೇಶ ಕರಿಯಪ್ಪ ಪೂಜಾರಿಯ ತಮ್ಮ ಸತೀಶ ಫೋನ್ ಮಾಡಿ ಸುಗುಣಾಳ ಮಗಳು ರಕ್ಷಿತಾ ಕೆಲಸಕ್ಕಂತಾ ತನ್ನ ಚಿಕ್ಕಮ್ಮನ ಮಗಳು ಶ್ರಾವಣಿಯ ಜೊತೆ ಸಾಸ್ತಾವು ದಾರಿಯಲ್ಲಿ ಪುತ್ತನಕಟ್ಟೆ ಕಡೆಯಿಂದ ನಡೆದುಕೊಂಡು ಹೋಗುವಾಗ ಉದಯ ಪೂಜಾರಿಯ ಮಗ ಕಾರ್ತಿಕ ಬೈಕ್‌ನಲ್ಲಿ ಬಂದು ತನ್ನ ಕೈಲಿದ್ದ ಚಾಕುವಿನಿಂದ ರಕ್ಷಿತಾಳ ಹೊಟ್ಟೆಗೆ ಇರಿದು, ಕುತ್ತಿಗೆಗೆ ಕೂಡಾ ತಿವಿದಿದ್ದು, ರಕ್ಷಿತಾ ಪ್ರಜ್ಞೆ ಕಳೆದುಕೊಂಡಿದ್ದಾಳೆ. ಆಗ ಅವಳನ್ನ ಮಣಿಪಾಲ ಆಸ್ಪತ್ರೆಗೆ ಸೇರಿಸಿದ್ದು ಬೇಗ ಬಾ ಅಂತಾ ಹೇಳಿದ ತಕ್ಷಣ ರಮೇಶ ಪೂಜಾರಿ ತನ್ನ ಸ್ಕೂಟರ್ ತೆಗೆದುಕೊಂಡು ಪುತ್ತನಕಟ್ಟೆಯ ಘಟನಾ ಸ್ಥಳಕ್ಕೆ ಬಂದು ನೋಡಿದರೆ, ಅಲ್ಲಿ ರಕ್ತದ ಕಲೆ ಇದ್ದು ರಕ್ಷಿತಾಳ ಚಪ್ಪಲಿ, ನೀರಿನ ಬಾಟ್ಲಿ ಮತ್ತು ಚೂರಿ ಸಹಿತ ಅಲ್ಲೇ ಬಿದ್ದುಕೊಂಡಿತ್ತು. ಅಷ್ಟೇ ಅಲ್ಲ ಕೆಎ-20 ಇಎ-5525 ಸಂಖ್ಯೆಯ ಕಾರ್ತಿಕನ ಬೈಕು ಅಲ್ಲೇ ಬಿದ್ದುಕೊಂಡಿತ್ತು. ಬೈಕ್ ಬಿಟ್ಟು ಕಾರ್ತಿಕ ಓಡಿ ಹೋಗಿದ್ದ. ಅಲ್ಲದೇ ರಕ್ಷಿತಾ ಜೊತೆ ಇದ್ದ ಶ್ರಾವಣಿಯನ್ನ ಹೆದರಿಸಿ ಓಡಿಸಿದ್ದಾನಂತೆ! ಚಾಕು ಇರಿತದಿಂದ ರಕ್ಷಿತಾಳ ಕಿಡ್ನಿ ಮತ್ತು ಕುತ್ತಿಗೆಗೆ ಗಾಯವಾಗಿದ್ದರಿಂದ ರಕ್ಷಿತಾ ಕೊನೆಯುಸಿರೆಳೆದಿದ್ದಾಳೆ!

**ಆರೋಪಿ ಹೆಣ ಬಾವೀಲಿ!**

ಘಟನಾ ಸ್ಥಳಕ್ಕೆ ಉಡುಪಿ ಎಸ್ಪಿ ಹರಿರಾಮ ಶಂಕರ್, ಉಡುಪಿ ಹೆಚ್ಚುವರಿ ಎಸ್ಪಿ ಸುಧಾಕರ ಸದಾನಂದ ನಾಯ್ಕ ಭೇಟಿ ನೀಡಿ ಮುಂದಿನ ತನಿಖೆಗೆ ಮಾರ್ಗದರ್ಶನ ನೀಡಿದರು. ಈ ಪ್ರಕರಣದ ಆರೋಪಿಯನ್ನ ಹುಡುಕುವ ಬಗ್ಗೆ ಉಡುಪಿ ಡಿವೈಎಸ್ಪಿ ಪ್ರಭು ಡಿ.ಟಿ, ಸಿಪಿಐ


ಆರೋಪಿ ಕಾರ್ತಿಕ್ ಪೂಜಾರಿ

ಗೋಪಾಲಕೃಷ್ಣ ಕೆ.ಆರ್.ರವರ ನೇತ್ರತ್ವದಲ್ಲಿ ಬ್ರಹ್ಮಾವರ ಎಸ್‌ಐ ಅಶೋಕ ಎಂ. ತಮ್ಮ ತಂಡದೊಂದಿಗೆ ಹತ್ತಿರದ ಕಾಡು, ಹಾಡಿ, ಆಸುಪಾಸಿನ ಊರುಗಳಲ್ಲಿ ಹುಡುಕ್ತಿದ್ದಾಗ ಆರೋಪಿ ಕಾರ್ತಿಕ ಅಲ್ಲೆಲ್ಲೂ ಪತ್ತೆಯಾಗಿಲ್ಲ. ಆನಂತರ




ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸರು

ವಿಚಿತ್ರವೇ ಎಂಬಂತೆ, ರಕ್ಷಿತಾಳ ಮನೆಯ ಬಾವೀಲಿ ಕಾರ್ತಿಕನ ಹೆಣ ಬಿದ್ದಿರುವುದು ಗೊತ್ತಾಗಿದೆ! ಅದೇನು ಅವನೇ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವನೋ ಅಥವಾ ಯಾರಾದರೂ ಹೊಡೆದು ಬಿಸಾಕಿದ್ದಾರೋ ಗೊತ್ತಿಲ್ಲ. ಬ್ರಹ್ಮಾವರಾದ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ತನಿಖೆ ಮುಗಿದ ಬಳಿಕವಷ್ಟೇ ಸತ್ಯ ಬಯಲಾಗಲಿದೆ.... ☯

---


4 ☞

ಒತ್ತಾಯಿಸಿದ್ದರು. ಆದರೆ ಪೊಲೀಸರು ಆಕೆಯ ಮೇಲೆ ವಿದೇಶಿ ಪ್ರಜೆಗಳು ಮತ್ತು ವಲಸೆ ಕಾನೂನುಗಳ ಅಡಿಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದಾರೆ.



ಈ ಪ್ರಕರಣದಲ್ಲಿ ದೂರು ನೀಡಿದ ಶಿವಾಜಿ ನಗರ ಪೊಲೀಸ್ ಠಾಣೆಯ ಎಟಿಸಿ ಘಟಕಕ್ಕೆ ಸೇರಿದ ಪೊಲೀಸ್ ಅಧಿಕಾರಿ ವಿಪಿನ್ ನಿಕಮ್ ಅವರು ಈ ಹಿಂದೆ ಬೈಸಾಖಿ ಶಹಾಬುದ್ದೀನ್ ಖಾನ್, ರಿಡೋಯ್ ಮಿಯಾ ಪಖಿ, ಮರುಖ್ ಇಕ್ಬಾಲ್ ಧಾಲಿ, ಶಾಂತಕಾಂತ್ ವಾಹಿದ್ ಖಾನ್, ವರ್ಷಾ ಕೋಬಿರ್ ಖಾನ್, ಅಫ್ಜಲ್ ಮೊಜನೂರ್ ಹುಸೇನ್, ಮಿರ್ಘಾನೂರ್ ಇಬ್ರಾಹಿಂ ಕೊಲಿಲ್ ಮತ್ತು ಶಹಾದತ್ ಅಮೀರ್ ಅಲಿ ಎಂಬುವರನ್ನು ಬಂಧಿಸಿ ವಿಚಾರಣೆಗೊಳಪಡಿಸಿದ್ದರು. ಈ ವೇಳೆ ಗುರುಮಾಳ ದಂಧೆ ಬಯಲಾಗಿತ್ತು.

ಸದ್ಯ ಗುರುಮಾ ಅಲಿಯಾಸ್ ಜ್ಯೋತಿ ವಿರುದ್ಧ ಪಾಸ್‌ಪೋರ್ಟ್ (ಭಾರತಕ್ಕೆ ಪ್ರವೇಶ) ಕಾಯ್ದೆ, 1950, ವಿದೇಶಿಯರ ಆದೇಶ, 1948, ವಿದೇಶಿಯರ ಕಾಯ್ದೆ, 1946 ಮತ್ತು ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಭಾರತದಲ್ಲಿ ಗುರುಮಾ ಅಲಿಯಾಸ ಜ್ಯೋತಿಯಂಥವರು ಇನ್ನೆಷ್ಟು ಮಂದಿಯಿದ್ದಾರೋ ಗೊತ್ತಿಲ್ಲ ಸಂಬಂಧಿಸಿದವರು ಗಂಭೀರವಾಗಿ ಪರಿಗಣಿಸಿ ಈ ದಂಧೆಗೆ ಕಡಿವಾಣ ಹಾಕುವುದು ಅಗತ್ಯವಾಗಿದೆ. ☯



# ಬಿಗ್ ಬಿ ಅಮಿತಾಬ್ ಬಚ್ಚನ್ ಮುಂದೆ ಉದ್ಧಟತನ ತೋರಿದ ಚೋಟಾ ಬಚ್ಚಾ!




ಕೂತು ಉಣ್ಣುವವನಿಗೆ ಕುಡುಕೆ ಹೊನ್ನೂ ಸಾಲದು ಎಂಬ ಮಾತನ್ನ ಚೆನ್ನಾಗಿ ಅರಿತು ಬದುಕು ಕಟ್ಟಿಕೊಂಡವರು ಅಮಿತಾಬ್ ಬಚ್ಚನ್. 81ರ ಪ್ರಾಯದಲ್ಲಿಯೂ ಕೂಡ ದುಡಿಮೆಯೇ ದುಡ್ಡಿನ ತಾಯಿ ಎಂದು ನಂಬಿ, ಕಾಯಕವೇ ಕೈಲಾಸ ಎಂಬ ಮಂತ್ರವನ್ನ ಪಠಿಸುತ್ತಿರುವ ಅಮಿತಾಬ್ ಬಚ್ಚನ್ ಕೇವಲ ಬೆಳ್ಳಿತೆರೆಯಲ್ಲಿ ಮಾತ್ರವಲ್ಲ ಕಿರುತೆರೆಯ ಸಕ್ರಿಯ ಸದಸ್ಯ ಕೂಡ ಹೌದು. ಕಳೆದ 24 ವರ್ಷಗಳಿಂದ ಕೌನ್ ಬನೇಗಾ ಕರೋಡ್ ಪತಿ ಕಾರ್ಯಕ್ರಮದ ನಿರೂಪಣೆಯನ್ನು ಮಾಡುತ್ತಾ ಬಂದಿರುವ ಅಮಿತಾಬ್, ತಮ್ಮೆದುರು ಕುಳಿತ ವ್ಯಕ್ತಿಗೆ ಪ್ರಶ್ನೆಯನ್ನು ಕೇಳುವುದಷ್ಟೇ ಅಲ್ಲದೇ ಅವರ ಜೊತೆ ಮುಕ್ತವಾಗಿ ಮಾತನಾಡಿಕೊಂಡು ಬಂದಿದ್ದಾರೆ. ಸ್ಪರ್ಧಿಗಳ ಬದುಕಿನ ಸುಖ ದುಃಖವನ್ನೂ ಕೇಳುತ್ತಾ ಬಂದಿದ್ದಾರೆ. ತಾವೂ ನಕ್ಕಿದ್ದಾರೆ. ಸ್ಪರ್ಧಿಗಳನ್ನು ನಗಿಸಿದ್ದಾರೆ. ಸ್ಪರ್ಧಿಗಳು ಕಣ್ಣೀರಾದಾಗ ಅಮಿತಾಬ್ ಕೂಡ ಕಣ್ಣೀರಾಗಿದ್ದಾರೆ.

ಇಂಥಾ ದಣಿವರಿಯದ ಮಹಾನಾಯಕನ ಎದುರು ಬಾಲಕ ಉದ್ಧಟತನದ ಪ್ರದರ್ಶನ ಮಾಡಿದ್ದಾನೆ. ಅಮಿತಾಬ್ ಬಚ್ಚನ್ ಅವರಿಗೆ ಅವಮಾನ ಮಾಡುವ ಮೂಲಕ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದ್ದಾನೆ. ಹೌದು, ಪ್ರತಿ ವರ್ಷದಂತೆ ಈ ವರ್ಷ ಕೂಡ ಅಮಿತಾಬ್ ''ಕೌನ್ ಬನೇಗಾ ಕರೋಡ್‌ಪತಿ ಜ್ಯೂನಿಯರ್'' ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ. ಈ ಕಾರ್ಯಕ್ರಮದಲ್ಲಿ ಗುಜರಾತ್ನ ಗಾಂಧಿನಗರದ ಐದನೇ ತರಗತಿ ವಿದ್ಯಾರ್ಥಿ ಇಷಿತ್ ಭಟ್‌ಗೆ ಅವಕಾಶ ಸಿಕ್ಕಿತ್ತು. ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ವಿಫಲವಾದ ಇಷಿತ್ ಕಾರ್ಯಕ್ರಮದುದ್ದಕ್ಕೂ ಅಮಿತಾಬ್ ಬಚ್ಚನ್ ಅವರನ್ನು ಅಗೌರವದಿಂದ ಕಂಡಿದ್ದಾನೆ. ಅವಮಾನವಾಗುವಂತೆ ಮಾತನಾಡಿದ್ದಾನೆ. ಕಾರ್ಯಕ್ರಮದ ಆರಂಭದಲ್ಲಿಯೇ ಅಮಿತಾಬ್ ಬಚ್ಚನ್ ಎಲ್ಲರಿಗೆ ಹೇಳುವಂತೆ ಕಾರ್ಯಕ್ರಮದ ನೀತಿ-ನಿಯಮವನ್ನು ಹೇಳಲು ಮುಂದಾದಾಗ ಅಮಿತಾಬ್ ಅವರನ್ನು ತಡೆದ ಬಾಲಕ ನನಗೆ ಎಲ್ಲ ನಿಯಮಗಳು ಗೊತ್ತು. ನೀವು ಅದೆಲ್ಲವೂ ನನಗೆ ಹೇಳುತ್ತಾ ಕೂರಬೇಡಿ ಎಂದು ಹೇಳುತ್ತಾನೆ. ಆ ನಂತರ ಬೆಳಿಗ್ಗೆ ಇವುಗಳಲ್ಲಿ ಯಾವುದನ್ನು ತಿನ್ನಲಾಗುತ್ತೆ ಎಂದು ಅಮಿತಾಬ್ ಕೇಳಿದಾಗ ಮತ್ತೆ ಕೈ ಮಾಡಿ ತಡೆಯುವ ಬಾಲಕ ಆಯ್ಕೆ ಕೊಡುವುದು ಬೇಡ ಬ್ರೇಕ್ ಫಾಸ್ಟ್ ಎಂಬ ಉತ್ತರ ನೀಡುತ್ತಾನೆ. ಆದ್ಯಾಗೂ ಅಮಿತಾಬ್ ಆಯ್ಕೆಗಳನ್ನು ನೀಡುತ್ತಾರೆ. ಆಗ ಮತ್ತೆ ಬ್ರೇಕ್ ಫಾಸ್ಟ್ ಲಾಕ್ ಮಾಡುವಂತೆ ಇಷಿತ್ ಹೇಳುತ್ತಾನೆ.

ಆ ನಂತರ ಅಮಿತಾಬ್ ಟ್ಯಾಂಗೋ... ಕಥಕ್.. ಮತ್ತು ಬ್ರೇಕ್ ಯಾವ ವಿಭಾಗಕ್ಕೆ ಸೇರಿದ್ದು ಎಂದು ಕೇಳಿದಾಗ ಆಯ್ಕೆ ಬರುವ ಮುನ್ನವೇ ಡ್ಯಾನ್ಸ್ ಎಂದು ಇಷಿತ್ ಹೇಳುತ್ತಾನೆ. ಆಯ್ಕೆ ನಿಮಗೆ ಬೇಡದೆ ಇರಬಹುದು ಆದರೆ ನೋಡುಗರಿಗೆ ತೋರಿಸಬೇಕಾಗುತ್ತೆ ಎಂದು ಅಮಿತಾಬ್ ಆಯ್ಕೆಗಳನ್ನು ತೋರಿಸುತ್ತಾರೆ. ಆ ನಂತರ ''ಚೆಸ್''ನಲ್ಲಿ ಎಷ್ಟು ಜನ ರಾಜರು ಇರುತ್ತಾರೆ ಎಂದು ಅಮಿತಾಬ್ ಕೇಳಿದಾಗ ಇದೊಂದು ಕೇಳುವ ಪ್ರಶ್ನೆನಾ...? ಇಬ್ಬರು ಇರುತ್ತಾರೆ ಎಂದು ಉತ್ತರಿಸುತ್ತಾನೆ. ಇಲ್ಲಿಯೂ ಕೂಡ ಆಯ್ಕೆಯನ್ನು ಹೇಳುವುದಕ್ಕೆ ಇಷಿತ್ ಬಿಡುವುದಿಲ್ಲ, ಆ ನಂತರ ವಾಲ್ಮೀಕಿ ರಾಮಾಯಣದ ಮೊದಲ ಕಾಂಡ ಯಾವುದು ಎಂದು ಐದನೇ ಪ್ರಶ್ನೆಯನ್ನು ಅಮಿತಾಬ್ ಬಚ್ಚನ್ ಕೇಳುತ್ತಾರೆ. ಈ ಸಮಯದಲ್ಲಿ ಆಯ್ಕೆಗಳನ್ನು ನೀಡದೆ ಅಮಿತಾಬ್ ಸತಾಯಿಸುತ್ತಾರೆ. ಇಲ್ಲಿಯವರೆಗೆ ನನಗೆ








ಆಯ್ಕೆಗಳನ್ನೇ ಕೊಡಬೇಡಿ ಎಂದು ಹೇಳುತ್ತಿದ್ದ ಇಷಿತ್ ಈಗ ಆಯ್ಕೆ ನೀಡುವಂತೆ ಕೇಳುತ್ತಾನೆ. ಆಗ ಅಲ್ಲಿದ್ದ ಪ್ರೇಕ್ಷಕರೆಲ್ಲಾ ಚಪ್ಪಾಳೆ ಹೊಡೆಯುತ್ತಾರೆ. ಅಮಿತಾಬ್ ಕೂಡ ನಸು ನಗುತ್ತಾರೆ. ಆ ನಂತರ ಎ. ಬಾಲ ಕಾಂಡ, ಬಿ. ಅಯೋಧ್ಯಾ ಕಾಂಡ, ಸಿ. ಕಿಷ್ಕಿಂಧಾ ಕಾಂಡ, ಡಿ. ಯುದ್ಧಕಾಂಡ ಎಂದು ಆಯ್ಕೆಗಳನ್ನು ನೀಡುತ್ತಾರೆ. ಇಲ್ಲಿ ಇಷಿತ್ ಎಡವುತ್ತಾನೆ. ಅತಿಯಾದ ಆತ್ಮವಿಶ್ವಾಸದಲ್ಲಿ ಯೋಚನೆಯನ್ನು ಕೂಡ ಮಾಡದೇ ಅಯೋಧ್ಯಾ ಕಾಂಡವನ್ನು ಚೆನ್ನಾಗಿ ಲಾಕ್ ಮಾಡಿ ಎಂದು ಹೇಳುತ್ತಾನೆ.

ಆಗ ಅಮಿತಾಬ್ ನಿಜಕ್ಕೂ ಲಾಕ್ ಮಾಡೋದಾ ಎಂದಾಗ ಅಯ್ಯೋ ಲಾಕ್ ಮಾಡಿ ಸರ್ ಒಂದು ಬೇಡ ಅದರ ಮೇಲೆ ನಾಲ್ಕು ಲಾಕ್‌ಗಳನ್ನು ಹಾಕಿ ಎನ್ನುತ್ತಾನೆ. ಆದರೆ ಉತ್ತರ ತಪ್ಪಾಗಿರುತ್ತೆ. ಸರಿಯಾದ ಉತ್ತರ ಬಾಲ ಕಾಂಡ ಆಗಿರುತ್ತೆ. ಈ ಮೂಲಕ 25,000 ಗೆದ್ದಿದ್ದ ಇಷಿತ್ ಎಲ್ಲವನ್ನು ಕಳೆದುಕೊಂಡು ಮರಳುತ್ತಾನೆ. ಸದ್ಯ ಈ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ. ಜನಾಕ್ರೋಶಕ್ಕೆ ಕೂಡ ಕಾರಣವಾಗಿದೆ. ಹಲವರು ಉದ್ಧಟತನದ ಪ್ರದರ್ಶನ ಮಾಡಿದ ಇಷಿತ್ ವಿರುದ್ಧ ಕೆರಳಿ ಕೆಂಡವಾಗಿದ್ದಾರೆ. ಸೋಶಿಯಲ್ ಮೀಡಿಯಾದಲ್ಲಿ ಇಷಿತ್ ಮತ್ತು ಇಷಿತ್‌ನ ಪೋಷಕರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಮಗುವಿನ ಲಾಲನೆ ಪಾಲನೆ ಹೇಗೆ ಮಾಡಬೇಕು ಎನ್ನುವುದಕ್ಕೆ ಪ್ರತಿ ಪೋಷಕರಿಗೆ ಇದೊಂದು ಪಾಠ ಎಂದು ಹೇಳಿದ್ದಾರೆ.

ನಿಮ್ಮ ಮಗು ಕೇವಲ ಜ್ಞಾನ ಇದ್ದರೆ ಮಾತ್ರ ಪ್ರಯೋಜನ ಇಲ್ಲ, ಆ ಮಗುವಿನಲ್ಲಿ ಸಭ್ಯತೆ ಇಲ್ಲದಿದ್ದರೆ ಅಥವಾ ಹಿರಿಯರ ಮುಂದೆ ಹೇಗೆ ಮಾತನಾಡಬೇಕೆಂದು ತಿಳಿದಿಲ್ಲದಿದ್ದರೆ, ಅವನು ಎಂದಿಗೂ ಯಶಸ್ವಿಯಾಗುವುದಿಲ್ಲ ಎಂದು ಹೇಳಿರುವ ಒಬ್ಬರು ನಾನು ಅಮಿತಾಬ್ ಬಚ್ಚನ್ ಅವರ ಸ್ಥಾನದಲ್ಲಿದ್ದರೆ, ಎರಡು ಬಾರಿ ಹೊಡೆದು ನಂತರ ಪ್ರಶ್ನೆಗಳನ್ನು ಕೇಳುತ್ತಿದ್ದೆ ಎಂದು ಹೇಳಿದ್ದಾರೆ. ಮತ್ತೊಬ್ಬರು, ಪರಿಪೂರ್ಣ ಅಂತ್ಯ. ಅಹಂಕಾರಕ್ಕೆ ತಕ್ಕ ಪಾಠ. ಬಹುಶಃ ಈಗ ಪೋಷಕರಿಗೆ ನಾವು ಪೋಷಕರಾಗಿ ಸರಿಯಾಗಿ ಕರ್ತವ್ಯ ನಿರ್ವಹಿಸಿಲ್ಲ ಎನ್ನುವುದು ಮನವರಿಕೆಯಾಗಿರಬಹುದು ಎಂದು ಹೇಳಿದ್ದಾರೆ. ಇದೇ ಮೊದಲ ಬಾರಿ ಒಂದು ಮಗು ಸೋತಾಗ ನಾನು ಚಪ್ಪಾಳೆ ಹೊಡೆದೆ ಎಂದು ಮತ್ತೊಬ್ಬರು ಹೇಳಿದ್ದಾರೆ. ಓವರ್ ಸ್ಮಾರ್ಟ್ ಕಿಡ್ ಎಂದು ಕೂಡ ಇಷಿತ್‌ನ ಕರೆಯುತ್ತಿದ್ದಾರೆ.

ಇನ್ನು ಕೆಲವರು ಮಗುವನ್ನು ಗುರಿಯಾಗಿಸಿಕೊಂಡು ಮಾತನಾಡಬೇಡಿ, ಟ್ರೋಲ್ ಮಾಡಬೇಡಿ, ತಪ್ಪು ಮಗುವಿನದ್ದಲ್ಲ ಅವನ ಹೆತ್ತವರದ್ದು ಅವರಿಗೆ ನೀವೇನೂ ಬೇಕಾದರು ಹೇಳಿ ಆದರೆ ಆ ಮಗುವನ್ನು ಬಿಟ್ಟು ಬಿಡಿ ಎಂದು ಮನವಿಯನ್ನು ಮಾಡುತ್ತಿದ್ದಾರೆ. ಇದೇ




ಸಮಯದಲ್ಲಿ ಕಾರ್ಯಕ್ರಮದಲ್ಲಿ ಎಲ್ಲಿಯೂ ತಾಳ್ಮೆಯನ್ನು ಕಳೆದುಕೊಳ್ಳದೇ ತುಂಬಾನೇ ಶಾಂತವಾಗಿ ತರ್ಲೆ ಇಷಿತ್‌ನನ್ನು ಕಾರ್ಯಕ್ರಮದ ಉದ್ದಕ್ಕೂ ಸಂಭಾಳಿಸಿ ಕೊನೆಗೆ ನಗು ನಗುತ್ತಲೇ ಹೊರ ಕಳುಹಿಸಿದ ಅಮಿತಾಬ್ ಬಚ್ಚನ್ ಅವರ ಈ ವರ್ತನೆಯನ್ನು ಹಲವರು ಮೆಚ್ಚಿ ಕೊಂಡಾಡುತ್ತಿದ್ದಾರೆ. ಹಿರಿಯರಿಗೆ ತಾಳ್ಮೆ ತುಂಬಾನೇ ಇದೆ ಹ್ಯಾಟ್ಸ್ ಆಫ್ ಯು ಸರ್ ಎಂದು ಹೊಗಳುತ್ತಿದ್ದಾರೆ. ☯


## ಕ್ರೋರ್ ಪತಿ ಶೋ ವೇದಿಕೆಯಲ್ಲಿ ರಿಷಬ್ ಪಂಚೆ ಶೋ!

ರಿಷಬ್ ಶೆಟ್ಟಿ ಅವರು ಅಮಿತಾಬ್ ಬಚ್ಚನ್ ಸಾರಥ್ಯದಲ್ಲಿ ಮೂಡಿಬರುತ್ತಿರುವ ಕೌನ್ ಬನೇಗಾ ಕ್ರೋರ್ ಪತಿ'ಯಲ್ಲಿ ಅವರ ವಿಶೇಷ ಆಹ್ವಾನದ ಮೇರೆಗೆ ಭಾಗವಹಿಸಿದ್ದರು. ಎಂದಿನಂತೆ ತನ್ನ ಲುಂಗಿ ಲುಕ್‌ನಲ್ಲಿ ಶೋಗೆ ಎಂಟ್ರಿಕೊಟ್ಟ ರಿಷಬ್ ಅವರ ಲುಂಗಿ ಉಡುವ ಕಲೆಯನ್ನು ಅಮಿತಾಬ್ ಬಚ್ಚನ್ ಬಹಳ ಮೆಚ್ಚಿಕೊಂಡರು.



ಎಂಟ್ರಿ ಕೊಟ್ಟ ತಕ್ಷಣ ಮೋಹನ್ ಲಾಲ್ ಚಿತ್ರದ ಡೈಲಾಗ್ ಒಂದನ್ನು ಹೇಳಿ ಖುಷಿ ಹಂಚಿದ ರಿಷಬ್ ಶೆಟ್ಟಿ, ಬಚ್ಚನ್‌ರ ಹತ್ರ ಬಂದ ಕೂಡಲೇ ಕೈಮುಗಿದು ನಮಸ್ಕರಿಸಿ, ಅಮಿತಾಬ್ ಅವರಿಗೆ ವಿಶೇಷ ಉಡುಗೊರೆಯನ್ನೂ ನೀಡಿದ್ದಾರೆ. ಹೂವು ತುಂಬಿದ ದೊಡ್ಡ ತಟ್ಟೆಯಲ್ಲಿ ಪಂಚೆ ಇಟ್ಟು ಕೊಟ್ಟಿದ್ದಾರೆ! ಅದನ್ನು ನೋಡಿ ಮನಸಾರೆ ನಕ್ಕ ಅಮಿತಾಬ್, ರಿಷಬ್ ಅವರೇ ನೀವು ಉಟ್ಟಿರುವಂಥಾ ಲುಂಗಿಯನ್ನು ನಾನು ಧರಿಸುವುದಕ್ಕೂ ಮುನ್ನ ಅದನ್ನು ಉಡುವುದನ್ನು ಕಲಿಯಬೇಕು. ಇಲ್ಲದೇ ಹೋದರೆ ಅಲ್ಲಿ ಕಳಚಿ ಹೋದರೆ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗುತ್ತದೆ ಎಂದು ತಮಾಷೆ ಮಾಡಿದ್ದಾರೆ.

ಕೌನ್ ಬನೇಗಾ ಕ್ರೋರ್ ಪತಿ ಸೀಸನ್ 17ರ ಈ ವಿಶೇಷ ಕಾರ್ಯಕ್ರಮ ಶುಕ್ರವಾರ ರಾತ್ರಿ 9 ಗಂಟೆಗೆ ಸೋನಿ ವಾಹಿನಿಯಲ್ಲಿ ಪ್ರಸಾರವಾಯಿತು. ಇದನ್ನು ಇಡೀ ಜಗತ್ತಿನ ಜನ ವೀಕ್ಷಿಸಿದ್ದಾರೆ. ಇಬ್ಬರು ಲೆಜೆಂಡರಿಗಳ ಸಂಗಮ. ರಿಷಬ್ ಶೆಟ್ಟಿಗಂತೂ ಇದು ಮರೆಯಲಾಗದ ಅನುಭವ. ಅಷ್ಟು ಜನಪ್ರಿಯ ನಟನಾದರೂ ಚೂರು ಜಂಭವಿಲ್ಲ, ಅದೇ ಗುಜರಾತ್ ಚಿಳ್ಳು ಹೈದನ ಅಧಿಕಪ್ರಸಂಗತನ ನೋಡಿ! ಯಾರೇ ಆಗಲಿ, ಮನೆಯಲ್ಲಿ ಮಕ್ಕಳಿಂದಲೇ ಸಂಸ್ಕಾರ ಕಲಿಸಬೇಕು.... ☯



ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ಗಾಂಧಿ ಭಾರತ
ರಾಷ್ಟ್ರಪಿತ ಮಹಾತ್ಮ ಗಾಂಧೀಜಿ
ಅವರ
156ನೇ ಜನ್ಮ ದಿನಾಚರಣೆ
2ನೇ ಅಕ್ಟೋಬರ್ 2025
"ಸತ್ಯ ಮತ್ತು ಪ್ರೇಮ ಒಂದೇ ನಾಣ್ಯದ ಎರಡು ಮುಖಗಳು. ಎಲ್ಲ ಕಾಲಕ್ಕೂ ಎಲ್ಲ ಜನಾಂಗಗಳಿಗೂ ಅತ್ಯಾವಶ್ಯಕವಾದದ್ದು ಪರಸ್ಪರ ಸಹಿಷ್ಣುತೆ"
– ಮಹಾತ್ಮ ಗಾಂಧೀಜಿ
ನಮ್ಮ ಕರ್ನಾಟಕ
ಗ್ಯಾರಂಟಿ ಕರ್ನಾಟಕ
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಗೃಹಲಕ್ಷ್ಮಿ ₹2000
ಅನ್ನಭಾಗ್ಯ 10 kg ಅಕ್ಕಿ
ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500
ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
CMofKarnataka https://dipr.karnataka.gov.in/
ಕರ್ನಾಟಕ ವಾರ್ತೆ

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 POSTED AT BANGALORE PSO BG 560026 Every Tuesday Publishing Date : 19.10.2025

# ರಾಜನ ಮಗನಾಗಿ ಹುಟ್ಟಿದ್ದರೂ... ಪುನೀತ್ ರಾಜ್‌ಕುಮಾರ್ ಅಪ್ಲಿಕೇಶನ್ ಪ್ರೊಮೋಗೆ ಕಿಚ್ಚ ಸುದೀಪ್ ಧ್ವನಿ

ರಾಜನ ಮಗನಾಗಿ ಹುಟ್ಟಿದ್ದರೂ ಸಾಮಾನ್ಯರ ಜೊತೆ ಜೊತೆಗೇ ಬೆಳೆದ; ಪುಟ್ಟದ ವಯಸ್ಸಲ್ಲೇ ಬೆಟ್ಟದ ಹೂವಾಗಿ ರಾಷ್ಟ್ರಪ್ರಶಸ್ತಿ ಪಡೆದ, ಮುಂದೆ ಸಾಲು ಸಾಲು ಹಿಟ್ ಸಿನಿಮಾ ನೀಡಿದ ಜೊತೆಗೆ ಜನಾನುರಾಗಿಯಾಗಿ ಬೆಳೆ ಅಪ್ಪು ಅವರ ವ್ಯಕ್ತಿಚಿತ್ರ ಈ ಟೀಸರ್‌ನಲ್ಲಿದೆ.



ಪುನೀತ್ ರಾಜ್‌ಕುಮಾರ್ ಅವರ ಕನಸಿಗೆ ರೆಕ್ಕೆ ಹಚ್ಚುವಂಥಾ ಪಿಆರ್‌ಕೆ ಫ್ಯಾನ್‌ಡಮ್ ಆ್ಯಪ್‌ನ ಟೀಸರ್‌ಗೆ ಕಿಚ್ಚ ಸುದೀಪ್ ಧ್ವನಿಯಾಗಿದ್ದಾರೆ. ಪಿಆರ್‌ಕೆ ಪ್ರೊಡಕ್ಷನ್ಸ್ ಯೂಟ್ಯೂಬ್‌ನಲ್ಲಿ ಬಿಡುಗಡೆಯಾದ ಈ ಟೀಸರ್‌ನಲ್ಲಿ ಪುನೀತ್ ಅವರ ಬಗೆಗಿನ ಭಾವುಕ ಮಾತುಗಳ ಜೊತೆಗೆ ಈ ಪಿಆರ್‌ಕೆ ಆ್ಯಪ್‌ನ ಉದ್ದೇಶ, ಹಿನ್ನೆಲೆ ಬಗ್ಗೆ ವಿವರಗಳಿವೆ.

'ಕರುನಾಡಿನ ಹೂದೋಟದಲ್ಲಿ ಅರಳಿದ ರಾಜಪುಷ್ಪ, ರಾಜನ ಮಗನಾಗಿ ಹುಟ್ಟಿದ್ದರೂ ಸಾಮಾನ್ಯರ ಜೊತೆ ಜೊತೆಗೇ ಬೆಳೆದ; ಪುಟ್ಟದ ವಯಸ್ಸಲ್ಲೇ ಬೆಟ್ಟದ ಹೂವಾಗಿ ರಾಷ್ಟ್ರಪ್ರಶಸ್ತಿ ಪಡೆದ, ಮುಂದೆ ಸಾಲು ಸಾಲು ಹಿಟ್ ಸಿನಿಮಾ ನೀಡಿದ ಜೊತೆಗೆ ಜನಾನುರಾಗಿಯಾಗಿ ಬೆಳೆದ' ಅಪ್ಪು ಅವರ ವ್ಯಕ್ತಿಚಿತ್ರ ಈ ಟೀಸರ್‌ನಲ್ಲಿದೆ. ಜೊತೆಗೆ 'ಪುನೀತ್ ಅವರ ಕನಸುಗಳನ್ನು, ಅವರ ಬಗೆಗಿನ ನಿರೀಕ್ಷೆಗಳನ್ನು ನಿಜ ಮಾಡಲು ಆರಂಭಿಸಿರುವ ಪ್ರಯತ್ನವಿದು. ಇದರಲ್ಲಿ ಎಲ್ಲರೂ ಕೈಜೋಡಿಸಬಹುದು' ಎಂಬ ವಿವರಣೆ ಇದೆ. ಅಕ್ಟೋಬರ್ 25ರಂದು ಈ ಫ್ಯಾನ್‌ಡಮ್ ಪಿಆರ್‌ಕೆ ಆ್ಯಪ್ ಲೋಕಾರ್ಪಣೆಯಾಗಲಿದೆ. ಈ ಅಪ್ಲಿಕೇಶನ್‌ನ ಲೋಕಾರ್ಪಣೆಗೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಆಹ್ವಾನಿಸಿದ್ದಾರೆ. ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಅವರನ್ನೂ ಸಹ ಆಹ್ವಾನಿಸುವ ಸಾಧ್ಯತೆ ಇದೆ.

# ಗೋಲ್ಡನ್ ಸ್ಟಾರ್ ಗಣೇಶ್‌ಗೆ ಮಾಳವಿಕಾ ಶರ್ಮಾ ಜೋಡಿ



'ಕೃಷ್ಣಂ ಪ್ರಣಯ ಸಖಿ' ಚಿತ್ರದ ಯಶಸ್ವಿ ಸಹಯೋಗದ ನಂತರ ಗೋಲ್ಡನ್ ಸ್ಟಾರ್ ಗಣೇಶ್ ಮತ್ತೊಮ್ಮೆ ನಿರ್ದೇಶಕ ಶ್ರೀನಿವಾಸ್ ರಾಜು ಅವರೊಂದಿಗೆ ಕೈಜೋಡಿಸುತ್ತಿದ್ದಾರೆ. ಆಗಸ್ಟ್‌ನಲ್ಲಿ ಸೆಟ್ಟೇರಿದ ಇನ್ನೂ ಹೆಸರಿಡದ ಈ ಚಿತ್ರವನ್ನು ಸಮೃದ್ಧಿ ಮಂಜುನಾಥ್ ಅವರ ಕೆವಿಸಿ ಪ್ರೊಡಕ್ಷನ್ಸ್ ಮತ್ತು ವಿರಾಟ್ ಸಾಯಿ ಕ್ರಿಯೇಷನ್ಸ್ ಪ್ರಸ್ತುತಪಡಿಸುತ್ತಿದ್ದು, ಈಗಾಗಲೇ ಚಿತ್ರದ ಶೇ 60ರಷ್ಟು ಚಿತ್ರೀಕರಣವನ್ನು ಪೂರ್ಣಗೊಳಿಸಿದೆ.

ಚಿತ್ರದಲ್ಲಿ ಇಬ್ಬರು ನಾಯಕಿಯರು ಇರಲಿದ್ದಾರೆ. ದೇವಿಕಾ ಭಟ್ ಅಧಿಕೃತವಾಗಿ ಚಿತ್ರತಂಡ ಸೇರ್ಪಡೆಗೊಂಡಿದ್ದರೆ, ಮಾಳವಿಕಾ ಶರ್ಮಾ ಈ ಚಿತ್ರದ ಮೂಲಕ ಕನ್ನಡಕ್ಕೆ ಪದಾರ್ಪಣೆ ಮಾಡಲಿದ್ದಾರೆ ಎನ್ನಲಾಗಿದೆ. ಮೂಲತಃ ವಕೀಲ ವೃತ್ತಿಯಿಂದ ಮಾಡೆಲ್ ಆಗಿ ಬದಲಾದ ಮಾಳವಿಕಾ,



ತೆಲುಗು ಮತ್ತು ತಮಿಳು ಚಿತ್ರಗಳಾದ ನೆಲ ಟಿಕೆಟ್ (2018), ರೆಡ್ (2021), ಕಾಫಿ ವಿತ್ ಕಾದಲ್ (2022), ಭೀಮಾ (2024) ಮತ್ತು ಹರೋಮ್ ಹರಾ (2024) ಚಿತ್ರಗಳಲ್ಲಿ ನಟಿಸಿದ್ದಾರೆ. ನಟಿ ಈ ತಿಂಗಳು ಚಿತ್ರೀಕರಣದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ. ಕೇರಳ, ಉತ್ತರ ಭಾರತ ಮತ್ತು ಭೂತಾನ್‌ನ ಸುಂದರವಾದ ಸ್ಥಳಗಳಲ್ಲಿ ಚಿತ್ರೀಕರಣ ನಡೆಸಲು ಯೋಜನೆ ರೂಪಿಸಲಾಗಿದ್ದು, ಈಗಾಗಲೇ ಮೈಸೂರಿನ ಹಲವು ಸ್ಥಳಗಳಲ್ಲಿ ಚಿತ್ರೀಕರಿಸಲಾಗಿದೆ.

ರೊಮ್ಯಾಂಟಿಕ್ ಚಿತ್ರಗಳಿಗೆ ಹೆಸರಾದ ಗಣೇಶ್ ಈ ಚಿತ್ರದ ಮೂಲಕ ಹೊಸ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಅವರು ಸಂಗೀತ, ಕೃಷಿ ಮತ್ತು ಪ್ರಕೃತಿಯೊಂದಿಗೆ ಆಳವಾದ ಸಂಪರ್ಕವನ್ನು ಹೊಂದಿರುವ ಬೌದ್ಧಿಕ ಪಾತ್ರವನ್ನು ನಿರ್ವಹಿಸಿಸುತ್ತಿದ್ದಾರೆ.

ಚಿತ್ರಕ್ಕೆ ವೆಂಕಟ್ ಪ್ರಸಾದ್ ಅವರ ಛಾಯಾಗ್ರಹಣ, ಹೇಶಮ್ ಅಬ್ದುಲ್ ವಹಾಬ್ ಅವರ ಸಂಗೀತ ಸಂಯೋಜನೆ ಇದೆ. ವಿಜಯ್ ಈಶ್ವರ್ ಮತ್ತು ಕ್ರಾಂತಿ ಕುಮಾರ್ ಸಂಭಾಷಣೆ ಬರೆದಿದ್ದಾರೆ. ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದ್ದು, 2026ರ ಆರಂಭದಲ್ಲಿ ಬಿಡುಗಡೆ ಮಾಡುವ ಗುರಿಯನ್ನು ಚಿತ್ರತಂಡ ಹೊಂದಿದೆ. 2025ರಲ್ಲಿ ನಟ ಗಣೇಶ್ ಅವರ ಯಾವುದೇ ಚಿತ್ರ ಬಿಡುಗಡೆಯಾಗಿಲ್ಲ.



# ಹಿಂದೂ ಯುವಕನನ್ನು ವರಿಸಿದ ಗಾಯಕಿ ಸುಹಾನಾ ಸೈಯದ್!

'ZEE Kannada' ವಾಹಿನಿಯ ಜನಪ್ರಿಯ ರಿಯಾಲಿಟಿ ಶೋ ಸರಿಗಮಪದ ಮೂಲಕ ಜನಪ್ರಿಯರಾಗಿದ್ದ ಶಿವಮೊಗ್ಗದ ಸಾಗರದ ಗಾಯಕಿ ಸುಹಾನಾ ಸೈಯ್ಯದ್ ಹಾಗೂ ರಂಗಭೂಮಿ ಕಲಾವಿದ ನಿತಿನ್ ಶಿವಾಂಶ್ ಇಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ನಗರದ ಖಾಸಗಿ ರೆಸಾರ್ಟ್‌ನಲ್ಲಿ ಗುರು ಹಿರಿಯರ ಹಾಗೂ ಆಪ್ತರ ಸಮ್ಮುಖದಲ್ಲಿ ಕುವೆಂಪು ಅವರ ಮಂತ್ರ ಮಾಂಗಲ್ಯದ ಆಶಯದಂತೆ ಸರಳವಾಗಿ ಅಂತರ್ ಧರ್ಮೀಯ ವಿವಾಹವಾದರು. ಇಬ್ಬರ ಧರ್ಮ ಬೇರೆ ಬೇರೆಯಾಗಿದ್ದರೂ ಧೈರ್ಯವಾಗಿ ಪ್ರೀತಿಸಿ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ.

ಹಿಜಬ್ ಧರಿಸಿ ಹಿಂದೂ ಭಜನೆ ಹಾಡುವ ಸುಹಾನಾಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಆದರೀಗ ಎಲ್ಲಾ ಅಡೆತಡೆಗಳನ್ನ ದಾಟಿ ತಾವು ಬಹುವರ್ಷಗಳಿಂದ ಪ್ರೀತಿಸುತ್ತಿರುವ ಅಂತರ್ ಧರ್ಮದ ಹುಡುಗನ ಜೊತೆ ಮದುವೆಯಾಗಿದ್ದಾರೆ.

ಸುಹಾನಾ ಸೈಯ್ಯದ್ ಹಾಗೂ ನಿತಿನ್ ಶಿವಾಂಶ್ ಹೈಸ್ಕೂಲ್ ನಲ್ಲಿ ಓದುತ್ತಿದ್ದಾಗಿನಿಂದಲೂ ಪರಿಚಯುವಂತೆ. ನಿತಿನ್ ರಂಗಭೂಮಿ ಕಲಾವಿದರಾಗಿದ್ದು, ಸುಹಾನಾ ಸೈಯ್ಯದ್‌ಗೂ ರಂಗಭೂಮಿ ಮೇಲೆ ಆಸಕ್ತಿಯಿತ್ತು. ಅಲ್ಲಿಂದ ಇಬ್ಬರ ಪರಿಚಯ ಮತ್ತಷ್ಟು ಗಾಢವಾಗಿದ್ದು, ಇಬ್ಬರ ನಡುವೆ ಪ್ರೇಮಂಕುರವಾಗಿದೆ. ಕುವೆಂಪು ಅವರ ಆಶಯದಂತೆ ಮಂತ್ರ ಮಾಂಗಲ್ಯದ ಮೂಲಕವೇ ಮದುವೆ ಆಗಬೇಕೆಂದು ಇಬ್ಬರು ನಿರ್ಧರಿಸಿದ್ದಾಗಿಯೂ ಹೇಳಿಕೊಂಡಿದ್ದಾರೆ.

'ಮದುವೆಯಾದರೆ, ಮಂತ್ರ ಮಾಂಗಲ್ಯವೇ ಆಗಬೇಕು' ಎಂಬ ಕನಸು ಬಹಳ ವರ್ಷಗಳಿಂದ ಇತ್ತು. ಅದು ಈಗ ನೆರವೇರಿದೆ ಹಾಗಾಗಿ ಬಹಳ ಖುಷಿಯಿದೆ. ತುಂಬಾ ಕಡಿಮೆ ಸಮಯದಲ್ಲಿ ಇದೆಲ್ಲ ನೆರವೇರಿದೆ. ಇಬ್ಬರ ಗುರುಗಳು ತುಂಬಾ ಜನ ಬಂದಿದ್ದಾರೆ ಎಂದು ಸುಹಾನಾ ಸೈಯ್ಯದ್ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಜೋಡಿಯ ಆಮಂತ್ರಣ ಪತ್ರಿಕೆಯಲ್ಲಿ, ಪ್ರೀತಿ ವಿಶ್ವದ ಭಾಷೆ, ಹೃದಯದಿಂದ ಹೊರಹೊಮ್ಮಿದ ಈ ಪ್ರೇಮ ಕಾವ್ಯ ದೇವ ವಿರಚಿತ. ಶ್ರೀ ಕುವೆಂಪುರವರ ಮಂತ್ರ ಮಾಂಗಲ್ಯದ ಆಶಯದಂತೆ ಸುಹಾನಾ ಹಾಗೂ ನಿತಿನ್ ಮದುವೆಯಾಗುತ್ತಿದ್ದೇವೆ. ನಮ್ಮ ನಡೆ ವಿಶ್ವಮಾನವತ್ವದೆಡೆಗೆ ಎಂದು ಹೇಳಿಕೊಂಡಿದ್ದರು.

Vol. 41 No. 20 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com